ಕೂಲಿ ನಿಗದಿ ಮಂಡಳಿಯು ಶಿಫಾರಸ್ಸು ಮಾಡಿರುವ ದರದಂತೆ ಬಂದಿಗಳಿಗೆ ಕೂಲಿಯನ್ನು ಹೆಚ್ಚಿಸಿದರೆ, ಬಂದಿಗಳಿಗೆ ನೀಡುತ್ತಿರುವ ಕೂಲಿ ಹಣಕ್ಕಿಂತ ಸುಮಾರು ರೂ. 1,30,000.00 ಗಳ ವೆಚ್ಚವನ್ನು ವರ್ಷಕ್ಕೆ ಹೆಚ್ಚಿಗೆ ಭರಿಸಬೇಕಾಗಿರುತ್ತದೆ. ಇದರಲ್ಲಿ ಸರಾಸರಿ ಶೇ. 50% ರಷ್ಟು ನಿರ್ವಹಣೆಯ ಖರ್ಚಿನ ರೂಪದಲ್ಲಿ ಸರ್ಕಾರಕ್ಕೆ ಪುನ: ಜಮೆ ಆಗುತ್ತದೆ.

ಈ ಹಿನ್ನೆಲೆಯಲ್ಲಿ ಕೂಲಿ ನಿಗದಿ ಮಂಡಳಿ ಶಿಫಾರಸ್ಸುಗಳನ್ನು ಅನುಕೂಲಕರವಾಗಿ ಪರಿಗಣಿಸಿ, ಕೆಳಕಂಡಂತೆ ಬಂದಿಗಳ ಕೂಲಿ ದರವನ್ನು ಹೆಚ್ಚಿಸಿ ಆದೇಶ ಹೊರಡಿಸಬೇಕೆಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಕೋರಿರುತ್ತಾರೆ.

ಕ್ರ.ಸಂ.	ಬಂದಿಗಳ ವರ್ಗ	ಈಗ ಕೂಲಿ ನಿಗದಿ ಮಂಡಳಿಯು ಶಿಫಾರಸ್ಸು ಮಾಡಿದ ಕೂಲಿ ಹಣ		
		ಹೆಚ್ಚಿಗೆ ಮಾಡಬೇಕಾದ ಕೂಲಿ ದರ	ಊಟ, ಬಟ್ಟೆ ಖರ್ಚು	ನಗದು ಪಾವತಿ
1	ತರಬೇತಿ ಕೆಲಸಗಾರ ಬಂದಿ (Unskilled)	ರೂ. 70.00	ರೂ. 40.00	ರೂ. 30.00
2	ಕುಶಲ ಬಂದಿ (Skilled)	ರೂ. 80.00	ರೂ. 40.00	ರೂ. 40.00
3	ಹೆಚ್ಚಿನ ಕುಶಲ ಬಂದಿ (Highly skilled)	ರೂ. 90.00	ರೂ. 40.00	ರೂ. 50.00

ಕೂಲಿ ನಿಗದಿ ಮಂಡಳಿಯ ಶಿಫಾರಸ್ಸುಗಳನ್ನು ಹಾಗೂ ಸದರಿ ಶಿಫಾರಸ್ಸುಗಳನ್ನು ಆಧರಿಸಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 298 ಪಿಆರ್‌ಎ 2008, ಬೆಂಗಳೂರು, ದಿನಾಂಕ: 18.3.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಕಾರಾಗೃಹಗಳಲ್ಲಿ ದಾಖಲಾಗಿರುವ ಬಂದಿಗಳಿಗೆ ಈ ಕೆಳಕಂಡಂತೆ ಕೂಲಿ ದರವನ್ನು ಹೆಚ್ಚಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

ಕ್ರಮಸಂ.	ಬಂದಿಗಳ ವರ್ಗ	ಈ ಹಿಂದೆ ಇದ್ದ ಕೂಲಿ ದರ			ಈಗ ಹೆಚ್ಚಿಸಿ ನಿಗದಿಪಡಿಸಿದ ಕೂಲಿ ದರ		
		ಕೂಲಿ ದರ ರೂ.	ಊಟ, ಬಟ್ಟೆ ಖರ್ಚು ರೂ.	ನಗದು ಪಾವತಿ ರೂ.	ಹೆಚ್ಚಿಸಿದ ಕೂಲಿ ದರ ರೂ.	ಊಟ, ಬಟ್ಟೆ ಖರ್ಚು ರೂ.	ನಗದು ಪಾವತಿ ರೂ.
1	ತರಬೇತಿ ಕೆಲಸಗಾರ ಬಂದಿ (Unskilled)	35.00	25.00	10.00	70.00	40.00	30.00
2	ಕುಶಲ ಬಂದಿ (Skilled)	40.00	25.00	15.00	80.00	40.00	40.00
3	ಹೆಚ್ಚಿನ ಕುಶಲ ಬಂದಿ (Highly skilled)	45.00	25.00	20.00	90.00	40.00	50.00

ಷರತ್ತುಗಳು

1. ಈ ಮೇಲಿನಂತೆ ನಿಗದಿಪಡಿಸಿದ ಕೂಲಿಗೆ ಬಂದಿಯು ಮಾಡುವ 08 ಗಂಟೆಗಳ ಕೆಲಸಕ್ಕೆ ಅನುಗುಣವಾಗಿ ಪಾವತಿಸತಕ್ಕದ್ದು.
2. ತರಬೇತಿ ಕೆಲಸಗಾರ ಬಂದಿ (Unskilled)ಯು ಕನಿಷ್ಠ 06 ತಿಂಗಳ ತರಬೇತಿ ಪಡೆದ ನಂತರ ಕುಶಲ ಕೆಲಸಗಾರ ಬಂದಿಯ (Skilled) ವರ್ಗಕ್ಕೆ ಪರಿಗಣಿಸತಕ್ಕದ್ದು.
3. ತರಬೇತಿ, ಕುಶಲ ಮತ್ತು ಅತಿಕುಶಲ ಬಂದಿಯನ್ನು ಅವರ ಕೆಲಸಕ್ಕೆ ಅನುಗುಣವಾಗಿ ವರ್ಗಾಯಿಸುವ ಅಧಿಕಾರವನ್ನು ಆಯಾ ಕಾರಾಗೃಹದ ಮುಖ್ಯಸ್ಥರ ವಿವೇಚನೆಗೆ ಸೇರಿರತಕ್ಕದ್ದು.
4. ಮಹಿಳಾ/ಪುರುಷ ಬಂದಿಗಳ ನಡುವೆ ಯಾವುದೇ ತಾರತಮ್ಯವಿಲ್ಲದೇ ಸಮಾನ ಕೆಲಸಕ್ಕೆ ಸಮಾನ ಕೂಲಿಯನ್ನು ನೀಡತಕ್ಕದ್ದು.
5. ಈಗ ಹೆಚ್ಚಿಸಿ ನಿಗದಿಪಡಿಸಲಾದ ಕೂಲಿ ದರವು ಮೂರು ವರ್ಷದವರೆಗೆ ಮಾತ್ರ ಜಾರಿಯಲ್ಲಿರತಕ್ಕದ್ದು.
6. ಬಂದಿಗಳಿಗೆ ಕೂಲಿ ಹಣವನ್ನು ಪಾವತಿಸುವ ವಿಚಾರದಲ್ಲಿ ಯಾವುದೇ ದೂರುಗಳು ಬಂದರೆ, ಅವುಗಳಿಗೆ ಆಯಾ ಕಾರಾಗೃಹದ ಮುಖ್ಯಸ್ಥರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.
7. ಕೂಲಿ ಹಣವನ್ನು ಪಾವತಿಸುವ ಸಲುವಾಗಿ ಬಿಡುಗಡೆ ಮಾಡುವ ಅನುದಾನವನ್ನು ಆ ಕಾರ್ಯಕ್ಕಾಗಿಯೇ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸಂದರ್ಭದಲ್ಲೂ ಅನುದಾನ ದುರುಪಯೋಗವಾಗತಕ್ಕದ್ದಲ್ಲ.
8. ಕೂಲಿ ಹಣವನ್ನು ಪಾವತಿಸಿದ ಬಗ್ಗೆ ವಿವರಗಳನ್ನು ಒಳಗೊಂಡ ವರದಿಯನ್ನು ಒಂದು ತಿಂಗಳಾದ ನಂತರ ಆ ಮುಂದಿನ ತಿಂಗಳ ಒಂದು ವಾರದೊಳಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರಿಗೆ ತಪ್ಪದೆ ಸಲ್ಲಿಸತಕ್ಕದ್ದು.
9. ಈ ಮೇಲಿನ ಷರತ್ತುಗಳನ್ನು ಆಯಾ ಕಾರಾಗೃಹದ ಮುಖ್ಯಸ್ಥರು ಪಾಲಿಸುತ್ತಿರುವರೇ? ಅಥವಾ ಇಲ್ಲವೇ? ಎಂಬುದನ್ನು ಪರಿಶೀಲಿಸುವ ಹಾಗೂ ಸೂಕ್ತ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಹೊಂದಿರುತ್ತಾರೆ.
10. ಕೂಲಿ ಹಣವನ್ನು ಪಾವತಿಸಿದ ಅಂಕಿ ಅಂಶಗಳನ್ನು ಒಳಗೊಂಡ ವಿವರಗಳುಳ್ಳ ತನಿಖೆಯ ಪಟ್ಟಿಯನ್ನೊಳಗೊಂಡ ವರದಿಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಆರು ತಿಂಗಳಿಗೊಮ್ಮೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶದಿಂದ ಉಂಟಾಗಬಹುದಾದ ಹೆಚ್ಚುವರಿ ವೆಚ್ಚವನ್ನು ಲೆಕ್ಕಶೀರ್ಷಿಕೆ "2056-00-101-0-01-051 ಸಾಮಾನ್ಯ ವೆಚ್ಚಗಳು (ಯೋಜನೇತರ); "2056-00-101-0-00-234 ಪಥ್ಯಾಹಾರವೆಚ್ಚ (ಯೋಜನೇತರ)" ಹಾಗೂ "2056-00-102-0-00-015 ಪೂರಕ ವೆಚ್ಚಗಳು (ಯೋಜನೇತರ)" ಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ: 10-7-1996 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 832

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ" ಯೋಜನೆಯನ್ನು ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ : ಡಿಡಬ್ಲ್ಯೂಸಿ/ಐಸಿಡಿ/ಎಎನ್‌ಜಿ-1/227/2009-10, ದಿನಾಂಕ : 26-4-2010 ಮತ್ತು 10-11-2010.

ಪ್ರಸ್ತಾವನೆ :

ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು 1975 ರಲ್ಲಿ ಪ್ರಾರಂಭಗೊಂಡಿದ್ದು, ಇಲ್ಲಿಯವರೆಗೆ 60046 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಪ್ರಸ್ತುತ 63342 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 61126 ಅಂಗನವಾಡಿ ಕಾರ್ಯಕರ್ತೆಯರು, 3319 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 53793 ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರ ಹುದ್ದೆಗಳು ಗೌರವಧನ ಸೇವೆಗೆ ಸೇರಿದ್ದು, ಇವರಿಗೆ ಕೇಂದ್ರ ಮತ್ತು ರಾಜ್ಯದ ವತಿಯಿಂದ ಮಾಹೆಯಾನ ಗೌರವಧನ ನೀಡಲಾಗುತ್ತಿದೆ. ಈ ಯೋಜನೆಯು ಕೇಂದ್ರ ಸರ್ಕಾರದ್ದಾಗಿದ್ದರೂ, ಅವರ ನಿವೃತ್ತಿ ವಯಸ್ಸು ನಿಗದಿಪಡಿಸುವಿಕೆ ಮತ್ತು ನಿವೃತ್ತಿ ಪರಿಹಾರ ಸೌಲಭ್ಯಗಳನ್ನು ನೀಡುವ ಕುರಿತು ಸಂಬಂಧಪಟ್ಟ ರಾಜ್ಯ ಸರ್ಕಾರವೇ ನಿರ್ಣಯಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ.

2010-11ನೇ ಸಾಲಿನ ಆಯವ್ಯಯದಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ ಯೋಜನೆ" ಯನ್ನು ಜಾರಿಗೊಳಿಸುವುದಾಗಿ ಘೋಷಿಸಿದ್ದು, 2010-11ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 119 ಐಸಿಡಿ 2010(1), ಬೆಂಗಳೂರು, ದಿನಾಂಕ : 18-3-2011

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2010-11ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ "ಇಡಿಗಂಟು (ಗೌರವಧನ) ಪಾವತಿ ಯೋಜನೆ" ಯನ್ನು ಕೆಳಕಂಡ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಯೋಜನೆಯ ಹೆಸರು	:	60 ವರ್ಷ ತುಂಬುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ ಯೋಜನೆ"
ಅರ್ಹತೆ	:	ದಿನಾಂಕ : 1-4-1955 ಕ್ಕೆ ಮೊದಲು ಹುಟ್ಟಿದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈ ಯೋಜನೆಗೆ ಅರ್ಹರಾಗುತ್ತಾರೆ.
ಯೋಜನೆಯ ವಿವರ	:	60 ವರ್ಷ ತುಂಬುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಂದ ಯಾವುದೇ ಸೇವೆಯನ್ನು ಪಡೆಯಲಾಗುವುದಿಲ್ಲ. ಸಾಮಾಜಿಕ ಭದ್ರತೆ ದೃಷ್ಟಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 50,000/- ಹಾಗೂ ಸಹಾಯಕಿಯರಿಗೆ ರೂ. 30,000/- ಗಳವರೆಗೆ ಇಡಿಗಂಟನ್ನು ನೀಡಲಾಗುವುದು.
ಲೆಕ್ಕಶೀರ್ಷಿಕೆ	:	2235-02-102-0-53 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 31 ವೆಚ್ಚ-3/11 ದಿನಾಂಕ : 8-2-2011 ರನ್ವಯ ಮತ್ತು ದಿನಾಂಕ : 22-2-2011 ರಂದು ನಡೆದ ಸಚಿವ ಸಂಪುಟದ ನಿರ್ಣಯದನ್ವಯ (ಪ್ರಕರಣ ಸಂಖ್ಯೆ : ಸಿ/98/2011) ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ-1

ಪಿ.ಆರ್. 866 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ : ಡಿಡಬ್ಲ್ಯೂಸಿ/ಐಸಿಡಿ/ ಎಎನ್‌ಜಿ-1/227/2009-10, ದಿನಾಂಕ : 26-4-2010 ಮತ್ತು 10-11-2010.

ಪ್ರಸ್ತಾವನೆ :

ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು 1975ರಲ್ಲಿ ಪ್ರಾರಂಭಗೊಂಡಿದ್ದು, ಇಲ್ಲಿಯವರೆಗೆ 60046 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಪ್ರಸ್ತುತ 63342 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 61126 ಅಂಗನವಾಡಿ ಕಾರ್ಯಕರ್ತೆಯರು, 3319 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 53793 ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರ ಹುದ್ದೆಗಳು ಗೌರವಧನ ಸೇವೆಗೆ ಸೇರಿದ್ದು, ಇವರಿಗೆ ಕೇಂದ್ರ ಮತ್ತು ರಾಜ್ಯದ ವತಿಯಿಂದ ಮಾಹೆಯಾನ ಗೌರವಧನ ನೀಡಲಾಗುತ್ತಿದೆ. ಈ ಯೋಜನೆಯು ಕೇಂದ್ರ ಸರ್ಕಾರದ್ದಾಗಿದ್ದರೂ, ಅವರ ನಿವೃತ್ತಿ ವಯಸ್ಸು ನಿಗದಿಪಡಿಸುವಿಕೆ ಮತ್ತು ನಿವೃತ್ತಿ ಪರಿಹಾರ ಸೌಲಭ್ಯಗಳನ್ನು ನೀಡುವ ಕುರಿತು ಸಂಬಂಧಪಟ್ಟ ರಾಜ್ಯ ಸರ್ಕಾರವೇ ನಿರ್ಣಯಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ.

2010-11ನೇ ಸಾಲಿನ ಆಯವ್ಯಯದಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ" ಯೋಜನೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿ ಅದಕ್ಕಾಗಿ ರೂ. 10.00 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಈ ಯೋಜನೆಯನ್ವಯ ಅಂಗನವಾಡಿ ಕಾರ್ಯಕರ್ತೆಯರಿಂದ ರೂ. 150/- ಹಾಗೂ ಸಹಾಯಕಿಯರಿಂದ ರೂ. 75/- ಮಾಹೆಯಾನ ವಂತಿಗೆ ವಸೂಲಿ ಮಾಡಿ ಅಷ್ಟೇ ಮೊತ್ತದ ವಂತಿಗೆಯನ್ನು ಸರ್ಕಾರ ಭರಿಸಬೇಕಾಗಿರುತ್ತದೆಂದು ವಿವರಿಸುತ್ತಾ, 2010-11ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 119 ಐಸಿಡಿ 2010, ಬೆಂಗಳೂರು, ದಿನಾಂಕ : 18-3-2011

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2010-11ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ" ಯನ್ನು ಈ ಕೆಳಕಂಡ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮಾರ್ಗಸೂಚಿ :

1. ಯೋಜನೆಯ ಹೆಸರು : ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ"
2. ಅರ್ಹತೆ : ದಿನಾಂಕ : 1-4-1955ರ ಹಾಗೂ ನಂತರದಲ್ಲಿ ಜನಿಸಿದ ಎಲ್ಲಾ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.
3. ಯೋಜನೆಯ ರೂವಾರಿ : (ಎ) NPS Lite ಯೋಜನೆಯನ್ನು PFRDA ಯವರು ರೂಪಿಸಿದ್ದು ಕಈಖಆಂ ಉಸ್ತುವಾರಿಯಲ್ಲಿ (governed) ನೂತನ ಪಿಂಚಣಿ ಯೋಜನೆ NPS lite ನಂತೆ ಅನುಷ್ಠಾನಗೊಳಿಸಲಾಗುವುದು.

   (ಬಿ) ಕೇಂದ್ರೀಯ ದಾಖಲೆ ನಿರ್ವಹಣ ಏಜೆನ್ಸಿ (CRA) ಮತ್ತು NPS ಟ್ರಸ್ಟ್ ಜೊತೆ ನಿರ್ದೇಶಕರು ನಿಯಮಾನುಸಾರ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.
4. ವಂತಿಗೆ ಪಾವತಿ : ಎ) ಅಂಗನವಾಡಿ ಕಾರ್ಯಕರ್ತೆಯರ ಪಾಲು-ಪ್ರತಿ ತಿಂಗಳು ರೂ. 150/-

   ಅಂಗನವಾಡಿ ಸಹಾಯಕಿಯರ ಪಾಲು-ಪ್ರತಿ ತಿಂಗಳು ರೂ. 75/-

   ಬಿ) ಸರ್ಕಾರದ ಪಾಲು :

   (1) ಅಂಗನವಾಡಿ ಕಾರ್ಯಕರ್ತೆಯರಿಗೆ-ಪ್ರತಿ ತಿಂಗಳು ರೂ. 150/-

   (ಬಿ) ಅಂಗನವಾಡಿ ಸಹಾಯಕಿಯರಿಗೆ-ಪ್ರತಿ ತಿಂಗಳು ರೂ. 75/-

   ಸಿ) ಕೇಂದ್ರ ಸರ್ಕಾರದ ಸ್ವಾವಲಂಬನ ಯೋಜನೆಯಡಿ ದೊರೆಯುವ ವಂತಿಗೆಯನ್ನು ಕೂಡ ಅಂಗನವಾಡಿ ನೌಕರರ ಖಾತೆಗೆ ಜಮಾ ಮಾಡಲಾಗುವುದು.

   ಡಿ) ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು 2010-11ನೇ ಸಾಲಿನಲ್ಲಿ ತಮ್ಮ ಪಾಲಿನ ಎರಡು ತಿಂಗಳ ವಂತಿಗೆಯನ್ನು ದಿನಾಂಕ : 31-3-2011ರ ಒಳಗಾಗಿ ನೀಡಿದಲ್ಲಿ, ರಾಜ್ಯ ಸರ್ಕಾರವು ಒಟ್ಟು ವಂತಿಗೆಯನ್ನು ರೂ. 1000/- ಕ್ಕೆ ಸರಿದೂಗಿಸಲು ಹೆಚ್ಚುವರಿಯಾಗಿ ತನ್ನ ವಂತಿಗೆಯನ್ನು ವಿಶೇಷ ಪ್ರಕರಣವೆಂದು ನೀಡುವುದು.

   ಇ) ಕ್ರಮ ಸಂಖ್ಯೆ (ಡಿ) ರಂತೆ ಹೆಚ್ಚುವರಿಯಾಗಿ ದಿನಾಂಕ : 1-4-2011 ಕ್ಕೆ 47 ರಿಂದ 55 ವರ್ಷದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ರಾಜ್ಯ ಸರ್ಕಾರವು ಒಂದು ಬಾರಿ ಈ ಕೆಳಕಂಡಂತೆ ಇಡಿಗಂಟನ್ನು ವಂತಿಗೆಯಾಗಿ ನೀಡುತ್ತದೆ.

ದಿನಾಂಕ : 31-3-2011 ಕ್ಕೆ ವಯಸ್ಸು ಮತ್ತಿತರ ಮಾಹಿತಿ

ವಯಸ್ಸು	ಅಂಗನವಾಡಿ ಕಾರ್ಯಕರ್ತೆಯರು ರೂ. ಗಳಲ್ಲಿ	ಅಂಗನವಾಡಿ ಸಹಾಯಕಿಯರು ರೂ.ಗಳಲ್ಲಿ
47	-	100
48	-	2400
49	1300	5000
50	5700	7800
51	10500	10800
52	15700	14200
53	21500	17800
54	27900	21900
55	34800	26300

5. ಪಿಂಚಣಿ ಮೊತ್ತ ಹಾಗೂ ಪಿಂಪಡೆಯುವ ನಿಯಮ : 60 ವರ್ಷವಾದ ನಂತರ NPS Lite ಯೋಜನೆಯಡಿ PFRDA ಯವರು ನಿಗದಿಸಿದಂತೆ.
6. ಹಣ ಹೂಡಿಕೆ ಆಯ್ಕೆ : ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಕಾಲಕಾಲಕ್ಕೆ ಅನುಮೋದಿಸುವಂತೆ.

7. ಸಿ.ಆರ್.ಎ ರವರ ಚಾರ್ಜ್: ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಯೋಜನೆಯಡಿ ಪ್ರಾರಂಭಿಕ ನೋಂದಣಿಗಾಗಿ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆ ಹಾಗೂ ಪ್ರತಿ ವರ್ಷ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಗರಿಷ್ಠ 12 ಬಾರಿ ವಂತಿಗೆಯನ್ನು ನೀಡುವಲ್ಲಿ ಬೇಕಾಗುವ ವೆಚ್ಚವನ್ನು ಸಹ ರಾಜ್ಯ ಸರ್ಕಾರ ಭರಿಸುತ್ತದೆ.

8. ಯೋಜನೆಯ Aggregator : ಎ) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಸಂಘಟಕರು) ಇವರು ಕಆಖಆಂ ಯಲ್ಲಿ Aggregator ರಾಗಿ ನೋಂದಾಯಿಸಿಕೊಳ್ಳುವುದು.

ಬಿ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪ್ರತ್ಯೇಕ ಹೆಚ್.ಆರ್.ಎಂ.ಎಸ್. ಅನ್ನು ಸ್ಥಾಪಿಸುವುದು.

9. ಯೋಜನೆಯ ವೆಚ್ಚ : ಲೆಕ್ಕಶೀರ್ಷಿಕೆ 2235-60-800-2-08-059 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 31 ವೆಚ್ಚ-3/11 ದಿನಾಂಕ : 8-2-2011 ರನ್ವಯ ಮತ್ತು ದಿನಾಂಕ : 22-2-2011 ರಂದು ನಡೆದ ಸಚಿವ ಸಂಪುಟದ ನಿರ್ಣಯದನ್ವಯ (ಪ್ರಕರಣ ಸಂಖ್ಯೆ : ಸಿ:98/2011) ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ-1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್. 867

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶುಆಸ್ಪತ್ರೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿರುವುದನ್ನು ರದ್ದುಪಡಿಸುವಿಕೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 550 ಪಸಸೇ 2009, ದಿನಾಂಕ : 2-12-2009.

2) ಪತ್ರ ಸಂಖ್ಯೆ : 631/2009-10, ದಿನಾಂಕ : 2-12-2009.

3) ಪತ್ರ ಸಂಖ್ಯೆ : ಜಿಇಎ 11712/2009-10, ದಿನಾಂಕ : 2-12-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶುಆಸ್ಪತ್ರೆ, ಶಿರಸಿ ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ಇವರು ಹೆಸರಘಟ್ಟ ಸುತ್ತಮುತ್ತಲು ಅನೇಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಶುವೈದ್ಯಕೀಯ ಫಾರಂಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚಾಗಿ ರಾಸುಗಳು ಕಾಲುಬಾಯಿ ಜ್ವರ ಕಾಯಿಲೆಗೆ ತುತ್ತಾಗುತ್ತಿದ್ದು, ಇಂತಹ ತುರ್ತು ಸಂದರ್ಭವಿರುವ ಕ್ಷೇತ್ರದ ಹುದ್ದೆಯನ್ನು ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡಿ ಮೂಕ ಪ್ರಾಣಿಗಳಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ಹಾಗೂ ಹುದ್ದೆ ಸ್ಥಳಾಂತರ ಮಾಡದಿರುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಸಹ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಸ್ಥಳಾಂತರ ಮಾಡಿದರೆ ಪ್ರಾಣಿಗಳ ಚಿಕಿತ್ಸೆಗೆ ತೊಂದರೆಯಾಗುವುದಲ್ಲದೇ ಪಶುಸಂಪತ್ತಿನ ಅಳಿವಿಗೆ ಕಾರಣವಾಗಲಿರುವುದರಿಂದ ಹುದ್ದೆ ಸ್ಥಳಾಂತರವನ್ನು ಕೈಬಿಡಲು ಕೋರಿರುತ್ತಾರೆ. ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಸ್ಥಳೀಯ ಶಾಸಕರ ಅಭಿಪ್ರಾಯವನ್ನು ಪರಿಗಣಿಸಿ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಸ್ಥಳಾಂತರಿಸಿರುವುದನ್ನು ರದ್ದುಪಡಿಸಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 550 ಪಸಸೇ 2009, ಬೆಂಗಳೂರು, ದಿನಾಂಕ : 15ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶು ಆಸ್ಪತ್ರೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ ಹಾಗೂ ಸದರಿ ಹುದ್ದೆಯನ್ನು ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿಯೇ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಪಿ. ನಾಗರಾಜ

ಪೀಠಾಧಿಕಾರಿ-2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ).

ಪಿ.ಆರ್. 868

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರ ವಿರುದ್ಧ ಸ್ವೀಕೃತವಾದ ದೂರು ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ : 1) ಶ್ರೀ ಎಂ. ಶಿವಾನಂದ ಇವರಿಂದ ಸ್ವೀಕೃತವಾದ ದೂರು ಮನವಿ ದಿನಾಂಕ : 28-10-2009.

2) ಸರ್ಕಾರದ ಪತ್ರ ಸಂಖ್ಯೆ : ಲಾ 135 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ 29-12-2009/ 2-1-2010.

3) ಶ್ರೀಯುತರ ಲಿಖಿತ ಹೇಳಿಕೆ ದಿನಾಂಕ : 15-1-2010.

4) ಸರ್ಕಾರದ ಪತ್ರ ಸಂಖ್ಯೆ : ಲಾ 37 ಎಲ್‌ಸಿಎಲ್ 2010, ದಿನಾಂಕ : 8/10-2-2010 ಹಾಗೂ 26/ 29-3-2010.

5) ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ಪತ್ರ ಸಂಖ್ಯೆ : ಎಡಿಎಂ ೫/ಬಿ/330/2010, ದಿನಾಂಕ : 30-12-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಮನವಿ ದಿನಾಂಕ : 28-10-2009 ರಂದು ಶ್ರೀ ಎಂ. ಶಿವಾನಂದ ಇವರು ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರ ವಿರುದ್ಧ ಸಲ್ಲಿಸಿದ್ದ ದೂರು ಮನವಿಯನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ : 29-12-2009/2-1-2010 ರ ಸರ್ಕಾರದ ಪತ್ರದಲ್ಲಿ ನೋಟರಿಯವರಿಗೆ ಕಳುಹಿಸಿ ಅವರ ವಿರುದ್ಧದ ಆರೋಪದ ಬಗ್ಗೆ ಲಿಖಿತ ಹೇಳಿಕೆಯನ್ನು ಕೋರಲಾಗಿತ್ತು. ಅದರಂತೆ ನೋಟರಿಯವರು ಮೇಲೆ (3)ರಲ್ಲಿ ಓದಲಾದ ದಿನಾಂಕ : 15-1-2010ರ ಮನವಿಯಲ್ಲಿ ಲಿಖಿತ ಹೇಳಿಕೆ ಸಲ್ಲಿಸಿದ್ದು, ಅದನ್ನು ಮೇಲೆ (4) ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ದೂರು ಹಾಗೂ ಶ್ರೀಯುತರ ಲಿಖಿತ ಹೇಳಿಕೆಯನ್ನು ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರಿಗೆ ಕಳುಹಿಸಿ ನಿಯಮಾನುಸಾರ ಪರಿಶೀಲಿಸಿ ವಿಚಾರಣಾ ವರದಿಯನ್ನು ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಮೇಲೆ (5) ರಲ್ಲಿ ಓದಲಾದ ದಿನಾಂಕ : 30-12-2010ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ನೋಟರಿಯವರು ಮೂಲ ಪಾಲುಪಟ್ಟಿ ದಸ್ತಾವೇಜನ್ನು ಪರಿಶೀಲಿಸದೆ ತಕರಾರು ದಾಸ್ತಾವೇಜಿನ ವಿಷಯವನ್ನು ಸಿಂಧು (ತಚಿಟುಜ) ಎಂದು ನಂಬಿ ಪ್ರಮಾಣೀಕರಿಸಿರುವುದು ಕಂಡುಬಂದಿದ್ದು, ಇದನ್ನು ಉದಾರವಾಗಿ ಪರಿಗಣಿಸಬಹುದೆಂದು ತಿಳಿಸಿದ್ದಾರೆ. ನೋಟರಿಯವರಿಂದ ಲೋಪವಾಗಿದ್ದರೂ, ಕಠಿಣ ಕ್ರಮ ತೆಗೆದುಕೊಳ್ಳುವಂತಹ ಪ್ರಕರಣವಾಗಿರುವುದಿಲ್ಲವೆಂದು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : 37 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ : 19-3-2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರಿಗೆ ಇನ್ನು ಮುಂದೆ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ಕರ್ತವ್ಯ ನಿರ್ವಹಿಸಲು ತಿಳುವಳಿಕೆ ನೀಡಿ ನೋಟರಿಗಳ ನಿಯಮಗಳು 1956ರ ನಿಯಮ 13(12) (ಬಿ) ಖಖಖ ರನ್ವಯ ಎಚ್ಚರಿಕೆ ನೀಡಿ ಪ್ರಕರಣ ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2),

ಪಿ.ಆರ್. 869 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರ-ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ : 1) ಮುಖ್ಯ ಅಭಿಯಂತರರು, (ವಿದ್ಯುತ್) ಪ್ರಸರಣ ನಿಗಮ ನಿಯಮಿತ, ಗುಲ್ಬರ್ಗಾ ಅವರ ಪತ್ರ ಸಂಖ್ಯೆ: ಸಿಇಇ/ಟಿಝಡ್/ಜಿಎಲ್‌ಬಿ/ ಎಸ್‌ಇಇ(ಓ)/ಎಇಇ.2/2010-11/12675-78, ದಿನಾಂಕ : 21-2-2011.

2) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಗುಲ್ಬರ್ಗಾ, ಇವರ ಪತ್ರ ಸಂಖ್ಯೆ : ಕಂ.ಭೂಸ್ವಾ-429/08-09, ದಿನಾಂಕ : 24-2-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂ. (1)ರಲ್ಲಿನ ಪತ್ರದಲ್ಲಿ ಮುಖ್ಯ ಅಭಿಯಂತರರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಗುಲ್ಬರ್ಗಾ, ಇವರು ಗುಲ್ಬರ್ಗಾ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿನ ಹೈಟೆನ್‌ಷನ್ ಲೈನ್ ಸ್ಥಳಾಂತರ ಮತ್ತು ವಿವಿಧ ವೆಚ್ಚಕ್ಕಾಗಿ ರೂ. 112.00 ಲಕ್ಷ ಅಂದಾಜು ಪತ್ರಿಕೆಯನ್ನು ಸಿದ್ದಪಡಿಸಿ ಕಳುಹಿಸಿರುತ್ತಾರೆ.

ಕ್ರಮ ಸಂ. (2) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಗುಲ್ಬರ್ಗಾ, ಇವರು ಗುಲ್ಬರ್ಗಾ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರಕ್ಕಾಗಿ ಒಟ್ಟು 112.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾವಿ 2011, ಬೆಂಗಳೂರು, ದಿನಾಂಕ : 17-3-2011

ಗುಲ್ಬರ್ಗಾ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಗುಲ್ಬರ್ಗಾ ತಾಲ್ಲೂಕಿನ ಶ್ರೀನಿವಾಸ ಸರಡಗಿ ಗ್ರಾಮದಲ್ಲಿ ಒಟ್ಟು 695.30 ಎಕರೆ ಜಮೀನಿನಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರ (110 ಏಗಿ ಋಚಿಟಿಚಿಥಿಜ ಉಣಟಭಿಚಿಡಿರಿಚಿ ¡¨ ಛಿಡಿಭಿಣಟ ಟಟಿಜ) ಕ್ಕಾಗಿ ರೂ. 112.00 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

2. ಸದರಿ ಮೊತ್ತವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 5465-01-190-1-05-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ- ಬಂಡವಾಳ ಹೂಡಿಕೆ (ಯೋಜನೆ)-ಯಡಿಯಲ್ಲಿ ಭರಿಸುವುದು.

3. ಈ ಹಣವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರು ಪೇಯಿಸ್ ರಸೀದಿ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು, ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆರ್ಥಿಕ ಇಲಾಖೆ 443 ವೆಚ್ಚ-1/11 ದಿನಾಂಕ : 15-3-2011 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಎ. ಬಾಬುರವೀಂದ್ರನಾಥ್ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. 870

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪರಶುರಾಮ್ ಆರ್. ದಬಾಲಿ, ಪ್ರೊ. ಪಿ.ಎಸ್.ಐ ರವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ.
ಓದಲಾಗಿದೆ : ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ : 47/ಸಿಬ್ಬಂದಿ-1/2007-08, ದಿನಾಂಕ : 27-11-2010.

ಪ್ರಸ್ತಾವನೆ :

ಶ್ರೀ ಪರಶುರಾಮ್ ಆರ್. ದಬಾಲಿ ರವರು ಪೊಲೀಸ್ ಇಲಾಖೆಯಲ್ಲಿ ಸೇವಾನಿರತ ಪಿಎಸ್ಐ ಆಗಿ ನೇಮಕಾತಿ ಹೊಂದಿ, ದಿನಾಂಕ : 15-12-2003 ರಂದು ಕರ್ತವ್ಯಕ್ಕೆ ವರದಿ ಮಾಡಿರುತ್ತಾರೆ. ಇವರ 2 1/2 ವರ್ಷಗಳ ಪರೀಕ್ಷಾರ್ಥ ಅವಧಿಯು ದಿನಾಂಕ : 15-6-2006 ರಂದು ಪೂರ್ಣಗೊಳ್ಳುತ್ತದೆ. ಇವರು ನಿಗದಿತ ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್‌ನಲ್ಲಿ 2004ನೇ ಸಾಲಿನ ಮೊದಲನೇ ಅಧಿವೇಶನದಲ್ಲಿ ಉರ್ತೀರ್ಣರಾಗಿರುತ್ತಾರೆ. ಆದ್ದರಿಂದ ಇವರ ಖಾಯಂಪೂರ್ವ ಅವಧಿಯನ್ನು ನೇಮಕಾತಿ ಪ್ರಾಧಿಕಾರದ ಅಧಿಕಾರಕ್ಕೊಳಪಟ್ಟು ದಿನಾಂಕ : 15-6-2006 ರಿಂದ 14-9-2007 ರವರೆಗೆ 1 ವರ್ಷ 3 ತಿಂಗಳ ಕಾಲ ವಿಸ್ತರಿಸಿ ಐಜಿಪಿ, ಈಶಾನ್ಯ ವಲಯ ರವರು ದಿನಾಂಕ : 20-7-2007 ರಲ್ಲಿ ಆದೇಶಿಸಿರುತ್ತಾರೆ. ನಂತರ ಅನುಪೂರಕ ಪರೀಕ್ಷೆಯಲ್ಲಿ ಸಿ.ಆರ್.ಪಿ.ಸಿ. ವಿಷಯದಲ್ಲಿ ಉತ್ತೀರ್ಣರಾಗಿರುತ್ತಾರೆ.

ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲವೆಂದು ಹಾಗೂ ಇವರು ಕರ್ತವ್ಯ ನಿಷ್ಠೆ ಉಳ್ಳವರಾಗಿದ್ದು, ಕೆ.ಸಿಎಸ್. (ಪ್ರೊಬೇಷನ್) ನಿಯಮ 1977ರ ನಿಯಮ 4 ಮತ್ತು 5(1) ರನ್ವಯ ಇವರು ಹೊಂದಿರುವ ಪಿ.ಎಸ್.ಐ. ಹುದ್ದೆಯ ಕಾರ್ಯಭಾರ ನಿರ್ವಹಿಸಲು ಸಮರ್ಥರಿರುತ್ತಾರೆಂದು ಖಾಯಂ ಪೂರ್ವ ಅವಧಿಯನ್ನು ದಿನಾಂಕ : 14-9-2007 ರಿಂದ 28-7-2009 ರ ವರೆಗೆ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು, 1977 ರ ನಿಯಮ 4(1) (ii) ರನ್ವಯ ವಿಸ್ತರಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 16 ಪೊಸಇ 2010, ಬೆಂಗಳೂರು, ದಿನಾಂಕ : 19-3-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1) (೨) ರನ್ವಯ ಶ್ರೀ ಪರಶುರಾಮ್ ಆರ್. ದಬಾಲಿ, ಪ್ರೊ.ಪಿ.ಎಸ್.ಐ. ರವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ : 14-9-2007 ರಿಂದ 28-7-2009 ರವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು).

ಪಿ.ಆರ್. 871

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ವಿಷಯ : ಶ್ರೀ ಕೆ.ಆರ್. ಚಾಮಯ್ಯ, ಏಕಸದಸ್ಯ ಸಮಿತಿಯನ್ನು ದಿನಾಂಕ : 1-4-2011 ರಿಂದ 31-7-2011 ರವರೆಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 38 ಆಡಳಿತ 2004, ದಿನಾಂಕ : 21-7-2005.
2. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 121 ಆಡಳಿತ 2006, ದಿನಾಂಕ : 28-10-2006.
3. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 118 ಆಡಳಿತ 2007, ದಿನಾಂಕ : 6-11-2007.
4. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 185 ಆಡಳಿತ 2008, ದಿನಾಂಕ : 31-3-2009.
5. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 23 ಆಡಳಿತ 2010, ದಿನಾಂಕ : 30-3-2010.
6. ಲೋಕಾಯುಕ್ತ, ಕರ್ನಾಟಕ ಸರ್ಕಾರ ಇವರ ಅ.ಸ. ಪತ್ರ ಸ : ಐಔಏ/ಕಖ-47/2009-10, ದಿನಾಂಕ : 9-3-2011.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿನ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸರ್ಕಾರದ ನಿವೃತ್ತ ಕಾನೂನು ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ನಿವೃತ್ತಿ ಉಪಾಧ್ಯಕ್ಷರು ಆದ ಶ್ರೀ ಕೆ.ಆರ್. ಚಾಮಯ್ಯರವರ ನೇತೃತ್ವದಲ್ಲಿ ಸಿಬ್ಬಂದಿ ಸಮೇತ ಏಕ ಸದಸ್ಯ ಸಮಿತಿಯನ್ನು

ರಚಿಸಲಾಯಿತು. ಏಕ ಸದಸ್ಯ ಸಮಿತಿಯ ಅಧ್ಯಕ್ಷರು ಕಾರ್ಯವರದಿ ಮಾಡಿಕೊಂಡ ನಂತರದಿಂದ ಒಂದು ವರ್ಷದ ಮಟ್ಟಿಗೆ ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. ಬೆಂಗಳೂರಿನ ವಿಶ್ವೇಶ್ವರಯ್ಯ ಮುಖ್ಯ ಗೋಪುರದ 11ನೇ ಮಹಡಿಯಲ್ಲಿ ಸದರಿ ಏಕಸದಸ್ಯ ಸಮಿತಿಗೆ ಸ್ಥಳಾವಕಾಶ ಕಲ್ಪಿಸಿದ ನಂತರ ಶ್ರೀ ಕೆ.ಆರ್. ಚಾಮಯ್ಯರವರು ದಿನಾಂಕ : 7-12-2005ರಂದು ಈ ಸಮಿತಿಯ ಕೆಲಸ ಕಾರ್ಯಗಳ ನಿರ್ವಹಣೆಗೆ ವರದಿ ಮಾಡಿಕೊಂಡಿರುತ್ತಾರೆ.

ಮೇಲೆ ಓದಲಾದ (2) ರಲ್ಲಿನ ಸರ್ಕಾರಿ ಆದೇಶದಲ್ಲಿ ಏಕ ಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 7-12-2006 ರಿಂದ ದಿನಾಂಕ : 6-12-2007 ರವರೆಗೆ ಒಂದು ವರ್ಷದವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿನ ಸರ್ಕಾರಿ ಆದೇಶದಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 7-12-2007 ರಿಂದ 31-3-2009 ರವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (4) ರಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1-4-2009 ರಿಂದ 31-3-2010 ರವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (5) ರಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1-4-2010 ರಿಂದ 31-3-2011 ರವರೆಗೆ ವಿಸ್ತರಿಸಲಾಗಿದೆ.

ಉಲ್ಲೇಖ (6)ರಲ್ಲಿ ಓದಲಾದ ಪತ್ರದಲ್ಲಿನ ಪ್ರಸ್ತಾವನೆ ಪರಿಗಣಿಸಿ ಏಕಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 1-4-2011 ರಿಂದ 31-7-2011 ರವರೆಗೆ ಮುಂದುವರೆಸಲು ಸರ್ಕಾರವು ತೀರ್ಮಾನಿಸುವುದರಿಂದ, ಅನುಮೋದಿಸಿರುವುದರಿಂದ, ದಿನಾಂಕ : 31-3-2011 ಕ್ಕೆ ಈ ಸಮಿತಿಯ ಕಾರ್ಯಾವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ ಅತೀ ತುರ್ತು ಕಾರ್ಯಗಳ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಘಟನೋತ್ತರ ಸಹಮತಿಯನ್ನು ಕಾಯ್ದಿರಿಸಿ ಆದೇಶ ಹೊರಡಿಸಲು ಉದ್ದೇಶಿಸಿದೆ. ಹಾಗೂ ಸರ್ಕಾರವು, ಮೇಲ್ಕಂಡ ಉದ್ದೇಶಕ್ಕೆ ವಿಸ್ತರಿಸುವುದಲ್ಲದೆ ಆರ್ಥಿಕ ಅಧಿನಿಯಮಗಳ ಮತ್ತು ಅದರಡಿಯಲ್ಲಿನ ನಿಯಮಾವಳಿಗಳ ಸಮೇತ ಪುಸ್ತಕ ಸಂಕಲನವನ್ನು ತಯಾರಿಸಲು ಹಾಗೂ 2000-2010 ರವರೆಗೆ ವ್ಯಪಗತವಾಗಿರುವ (Spent Acts) ತಿದ್ದುಪಡಿ ಅಧಿನಿಯಮಗಳ ನಿರಸನ ವಿಧೇಯಕವನ್ನು ಪ್ರಸ್ತಾಪಿಸುವಂತೆ ಹೆಚ್ಚುವರಿ ಕಾರ್ಯಗಳನ್ನು ವಹಿಸುತ್ತಾ, ದಿನಾಂಕ : 1-4-2011 ರಿಂದ 31-7-2011 ರವರೆಗೆ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ವಿಸ್ತರಿಸಲು ಉದ್ದೇಶಿಸಿದೆ.

ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಂವ್ಯಶಾಇ 65 ಆಡಳಿತ 2011, ಬೆಂಗಳೂರು, ದಿನಾಂಕ : 19-3-2011

ದಿನಾಂಕ : 21-7-2005 ರ ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 38 ಆಡಳಿತ 2004 ರಲ್ಲಿ ರಚಿತವಾಗಿರುವ ಶ್ರೀ ಕೆ.ಆರ್. ಚಾಮಯ್ಯ ಏಕ ಸದಸ್ಯ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪ್ರಾಂತೀಯ ಅಧಿನಿಯಮಗಳ ಸಂಕಲನದ ಕೋಡ್ ತಯಾರಿಸುವ ಕೆಲಸದೊಂದಿಗೆ ಹಾಗೂ ಆರ್ಥಿಕ ಅಧಿನಿಮಯಗಳ (Financial Acts) ಮತ್ತು ಅದರಡಿಯಲ್ಲಿನ ನಿಯಮಾವಳಿಗಳ ಸಮೇತ ಪುಸ್ತಕ ಸಂಕಲನವನ್ನು ತಯಾರಿಸಲು ಹಾಗೂ 2000-2010ರವರೆಗೆ ವ್ಯಪಗತವಾಗಿರುವ (Spent Acts) ತಿದ್ದುಪಡಿ ಅಧಿನಿಯಮಗಳ ನಿರಸನ ವಿಧೇಯಕವನ್ನು ಪ್ರಸ್ತಾಪಿಸುವಂತೆ ಹೆಚ್ಚುವರಿ ಕಾರ್ಯಗಳನ್ನು ವಹಿಸುತ್ತಾ, ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1-4-2011 ರಿಂದ 31-7-2011 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಸದರಿ ಸಮಿತಿಗೆ ಮಂಜೂರು ಮಾಡಿರುವ ಪೂರಕ ಸಿಬ್ಬಂದಿಯನ್ನು, ವಾಹನ ಮತ್ತು ದೂರವಾಣಿ ಸೌಲಭ್ಯಗಳು ಹಾಗೂ ಏಕ ಸದಸ್ಯ ಸಮಿತಿಯ ಸದಸ್ಯರಾದ ಶ್ರೀ ಕೆ.ಆರ್. ಚಾಮಯ್ಯರವರ ಸೇವಾ ಷರತ್ತುಗಳು ಹಾಗೂ ಇತರೆ ಸೌಲಭ್ಯಗಳೊಂದಿಗೆ ಮೇಲೆ ಹೇಳಲಾದ ಅವಧಿಗೆ ಏಕ ಸದಸ್ಯ ಸಮಿತಿಯು ಮುಂದುವರಿಯುವಂತೆ ಆದೇಶಿಸಲಾಗಿದೆ.

ಈ ಸಮಿತಿಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2052-00-090-0-20-ಶ್ರೀ ಕೆ.ಆರ್. ಚಾಮಯ್ಯ ಏಕ ಸದಸ್ಯ ಸಮಿತಿ ಅಡಿಯಲ್ಲಿ ಭರಿಸಬಹುದಾಗಿದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳು ಏಕ ಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 1-4-2011 ರಿಂದ 31-7-2011 ರವರೆಗೆ ಮುಂದುವರೆಸಲು ಅನುಮೋದಿಸಿರುವುದರಿಂದ, ದಿನಾಂಕ : 31-3-2011 ಕ್ಕೆ ಈ ಸಮಿತಿಯ ಕಾರ್ಯಾವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ ಅತೀ ತುರ್ತು ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯ ಘಟನೋತ್ತರ ಸಹಮತಿಯನ್ನು ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 872

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳಿಪುರಂನಲ್ಲಿ ಹೊಂದಿರುವ ಜಮೀನಿನಲ್ಲಿ ರೇಷ್ಮೆ ಸಂಕೀರ್ಣ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ :
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರ ಪತ್ರ ಸಂಖ್ಯೆ: ಪಿಎಸ್/ಸಿಡಿಎಸ್/ಓಕಳಿ/ಬಿಲ್ಡಿಂಗ್/2004, ದಿನಾಂಕ 30-1-2004, 20-9-2004 ಹಾಗೂ ಪತ್ರ ಸಂಖ್ಯೆ: ಬೆರೆವೀಕೆ/ತಾಂ7/ರೇಸಂ/2007-08, ದಿನಾಂಕ 15-6-2007, 7-9-2007, 14-2-2008, 31-3-2008, 6-7-2009, 21-10-2009, 6-2-2010 ಹಾಗೂ 22-11-2010.
2. ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 31-3-2010

ಪ್ರಸ್ತಾವನೆ :

ರೇಷ್ಮೆ ವ್ಯವಸಾಯವು ಗುಡಿಕೈಗಾರಿಕೆಯಾಗಿದ್ದು, ಗ್ರಾಮಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಜನರಿಗೆ ಉದ್ಯೋಗದ ಅವಕಾಶ ಕಲ್ಪಿಸಿದೆ. ಕರ್ನಾಟಕದಲ್ಲಿ ರೇಷ್ಮೆ ವ್ಯವಸಾಯವನ್ನು ಸುಮಾರು ವರ್ಷಗಳಿಂದ ಕೈಗೊಳ್ಳಲಾಗುತ್ತಿದೆ. ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕವು ದೇಶದಲ್ಲಿ [illegible]

ಸ್ಥಾನ ಹೊಂದಿರುತ್ತದೆ. ರೇಷ್ಮೆ ಇಲಾಖೆಯು ರೇಷ್ಮೆ ವ್ಯವಸಾಯದಲ್ಲಿ ತೊಡಗಿರುವ ರೈತರಿಗೆ ತಾಂತ್ರಿಕ ಮಾಹಿತಿ ನೀಡುವ, ಹಿಪ್ಪುನೇರಳೆಯ ಸುಧಾರಿತ ಬೇಸಾಯದ ಪದ್ಧತಿ ಅಳವಡಿಸುವ ಹೊಸ ಪದ್ಧತಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ತೊಡಗಿರುವವರಿಗೆ ಕ್ಷೇತ್ರ ಮಟ್ಟದಲ್ಲಿ ಮಾಹಿತಿ ನೀಡುವಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಮತ್ತು ರೇಷ್ಮೆ ಮೂಲ ತಳಿಗಳ ನಿರ್ವಹಣೆಯಲ್ಲಿ ಹಾಗೂ ರೇಷ್ಮೆ ಗೂಡಿನ ವಹಿವಾಟಿಗೆ ರೇಷ್ಮೆ ಮಾರುಕಟ್ಟೆಗಳ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇಲಾಖೆಯು ಕರ್ನಾಟಕ ರಾಜ್ಯಾದ್ಯಂತ ರೇಷ್ಮೆ ಕೃಷಿ ಕ್ಷೇತ್ರ, ರೇಷ್ಮೆ ಬಿತ್ತನೆ ಕೋಠಿ, ರೇಷ್ಮೆ ಗೂಡಿನ ಮಾರುಕಟ್ಟೆ, ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರ, ರೇಷ್ಮೆ ತರಬೇತಿ ಸಂಸ್ಥೆಗಳನ್ನು ಹೊಂದಿರುತ್ತದೆ. ರೇಷ್ಮೆ ಇಲಾಖೆಯಲ್ಲಿ ಒಟ್ಟಾರೆಯಾಗಿ 4476 ಅಧಿಕಾರಿ/ಸಿಬ್ಬಂದಿ ವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ. ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳೀಪುರಂನಲ್ಲಿ 4.752 ಎಕರೆ ಜಮೀನನ್ನು ಹೊಂದಿರುತ್ತದೆ. (ಜಮೀನಿನ ಸರ್ವೆ ನಂಬರ್ 12,14,17 ಮತ್ತು ಕಾರ್ಪೋರೇಷನ್ ವಾರ್ಡ್ ಸಂಖ್ಯೆ 21). ಈ ಜಮೀನನ್ನು ರೇಷ್ಮೆ ಇಲಾಖೆ ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಬಿಚ್ಚಾಣಿಕೆದಾರರು, ರೇಷ್ಮೆ ವರ್ತಕರು ಹಾಗೂ ಇತರರಿಂದ ಸಂಗ್ರಹವಾದ ತೆರಿಗೆಯ ಕ್ರೋಢೀಕೃತ ಅನುದಾನವನ್ನು ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೂ. 10.35 ಕೋಟಿಗಳನ್ನ ಉಪಯೋಗಿಸಿ ಖರೀದಿಸಿರುತ್ತದೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಎಲ್ಲಾ ಕಛೇರಿಗಳಿಗೆ ಒಂದೇ ಕಡೆ ಸ್ವಂತ ಸ್ಥಳಾವಕಾಶವನ್ನು ಮಾಡಿಕೊಡುವುದಕ್ಕಾಗಿ ಹಾಗೂ ಇಲಾಖೆಯ ಸಹೋದರ ಸಂಸ್ಥೆಗಳಾದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಹಾಗೂ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತಗಳಿಗೆ ಸ್ಥಳಾವಕಾಶ ಒದಗಿಸುವುದಕ್ಕಾಗಿ ಹುಡ್ಕೋದಿಂದ ಸಾಲ ಪಡೆದು ರೇಷ್ಮೆ ಸಂಕೀರ್ಣ ನಿರ್ಮಾಣ ಮಾಡಲು ಮಂಜೂರಾತಿ ಕೋರಿ ಮೇಲೆ ಓದಲಾದ ಕ್ರಮಸಂಖ್ಯೆ (1)ರ ದಿನಾಂಕ 30-1-2004ರ ಪತ್ರದಲ್ಲಿ ರೇಷ್ಮೆ ಆಯುಕ್ತರು ಪ್ರಸ್ತಾವನೆ ಕಳುಹಿಸಿದ್ದರು. ಹುಡ್ಕೋದಿಂದ ಸಾಲ ತೆಗೆದುಕೊಳ್ಳಲು ಭಾರತ ಸಂವಿಧಾನ ಅನುಚ್ಛೇದ 293(3)ರ ಪ್ರಕಾರ ಅವಕಾಶವಿಲ್ಲದ್ದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿತ್ತು. ನಂತರ ರೇಷ್ಮೆ ಆಯುಕ್ತರು ರೇಷ್ಮೆ ಸಂಕೀರ್ಣವನ್ನು ಕೆ.ಎಸ್.ಐ.ಐ.ಡಿ.ಸಿ.ಯ ಸಹಯೋಗದಿಂದ ಬಿ.ಓ.ಟಿ. ಆಧಾರದ ಮೇಲೆ ನಿರ್ಮಾಣ ಮಾಡುವ ಬಗ್ಗೆ ಕಳುಹಿಸಿದ್ದ ಮೇಲೆ ಓದಲಾದ ಕ್ರಮಸಂಖ್ಯೆ(1)ರ ದಿನಾಂಕ 15-6-2007ರ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಪ್ರಸ್ತಾವನೆ ಯೋಗ್ಯವಲ್ಲದ್ದರಿಂದ ಈ ಪ್ರಸ್ತಾವನೆಯನ್ನೂ ಸಹ ಕೈಬಿಡಲಾಯಿತು. ಈ ಬಗ್ಗೆ ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 3-12-2009 ರಂದು ನಡೆದ ಸಭೆಯ ತೀರ್ಮಾನದಂತೆ ರೇಷ್ಮೆ ಭವನವನ್ನು ಇಲಾಖೆಯಿಂದಲೇ ನಿರ್ಮಾಣ ಮಾಡುವುದಕ್ಕಾಗಿ ರೂ. 30.00 ಕೋಟಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ಪರಿಷ್ಕೃತ ಪ್ರಸ್ತಾವನೆಯನ್ನು ರೇಷ್ಮೆ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರ ದಿನಾಂಕ 6-2-2010ರಲ್ಲಿ ಕಳುಹಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 31-3-2010 ರಂದು ನಡೆಸಿದ ಸಭೆಯಲ್ಲಿ ರೇಷ್ಮೆ ಸಂಕೀರ್ಣವನ್ನು ಇಲಾಖಾ ವತಿಯಿಂದ ನಿರ್ಮಾಣ ಮಾಡಲು ತೀರ್ಮಾನಿಸಿ, ಈ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಲು ತೀರ್ಮಾನಿಸಲಾಯಿತು. ಅದರಂತೆ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ರೇಷ್ಮೆ ಇಲಾಖೆಯು ಓಕಳಿಪುರಂನಲ್ಲಿ ಹೊಂದಿರುವ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರದ ಅನುಮೋದನೆ ನೀಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 10 ರೇಯೋವಿ 2006, ಬೆಂಗಳೂರು, ದಿನಾಂಕ : 23-5-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳೀಪುರಂನಲ್ಲಿ (ಸರ್ವೆ ನಂ. 12,14,17 ಮತ್ತು ಕಾರ್ಪೋರೇಷನ್ ವಾರ್ಡ್ ಸಂಖ್ಯೆ 21) ಹೊಂದಿರುವ 4.752 ಎಕರೆ ಜಮೀನಿನಲ್ಲಿ ರೇಷ್ಮೆ ಆಯುಕ್ತರು ದಿನಾಂಕ 6-2-2010ರ ಪತ್ರದಲ್ಲಿ ಪ್ರಸ್ತಾವಿಸಿರುವಂತೆ ಹಾಗೂ ನೀಲಿ ನಕ್ಷೆ ಕಳುಹಿಸಿರುವಂತೆ 16,790 ಚದರ ಮೀಟರ್ (1,80,700 ಚದರ ಅಡಿ) ವಿಸ್ತೀರ್ಣದಲ್ಲಿ ರೂ. 30.00 ಕೋಟಿ ವೆಚ್ಚದಲ್ಲಿ ರೇಷ್ಮೆ ಸಂಕೀರ್ಣ ನಿರ್ಮಿಸುವುದಕ್ಕೆ ಸದರಿ ಸಂಕೀರ್ಣದ ಪ್ರಸ್ತಾವಿತ ಕಟ್ಟಡದಲ್ಲಿಯ ಕನಿಷ್ಠ 50% ವಿಸ್ತೀರ್ಣವನ್ನು ಇತರೆ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಅಥವಾ ಸಾರ್ವಜನಿಕ ಪಟ್ಟಿಯಲ್ಲಿ ಒಳಗೊಂಡಿರುವ ಬ್ಲೂಚಿಪ್ ಪ್ರೈವೇಟ್ ಕಂಪನಿಗಳಿಗೆ ಬಾಡಿಗೆಗೆ ನೀಡಲು ಮೀಸಲಿಡಬೇಕೆಂಬ ಷರತ್ತಿನೊಂದಿಗೆ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/985/ವೆಚ್ಚ-1/2010, ದಿನಾಂಕ 11-6-2010 ಹಾಗೂ ಟಿಪ್ಪಣಿ ಸಂಖ್ಯೆ: ಆಇ/61/ವೆಚ್ಚ-1/2011, ದಿನಾಂಕ 12-2-2011 ರಂದು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ)

ಪಿ.ಆರ್. 1287

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು, ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆಯ ಬಲದಂಡೆ ಮುಖ್ಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶನುಸಾರ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ(ಉತ್ತರ)ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/6573, ದಿನಾಂಕ 08-12-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆ ಮತ್ತು ಮುಖ್ಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಸಿಕೊಂಡ ಹಸರಗುಂಡಗಿ ಗ್ರಾಮದ ಜಮೀನುಗಳಿಗ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಚಿಂಚೋಳಿ ದಿನಾಂಕ 04-04-2009ರಂದು ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಪಾವತಿಸಲು ರೂ. 2,06,489/-ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ಉತ್ತರ)ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 08-12-2010ರ ಪತ್ರದಲ್ಲಿ ಕೋರಿರುತ್ತಾರೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ದಿನಾಂಕ 26-06-97ರಂದು ಹೊರಡಿಸಿದೆ.
- ಭೂಸ್ವಾಧೀನಾಧಿಕಾರಿಗಳು ದಿನಾಂಕ 15-02-1999 ರಂದು ಐತೀರ್ಪು ರಚಿಸಿದ್ದು ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ. 17,000/-ಗಳನ್ನು ನಿಗದಿ ಮಾಡಿದ್ದಾರೆ.

ಭೂಸ್ವಾಧೀನಕ್ಕೊಳಪಟ್ಟ ಜಮೀನಗಳ ಭೂಮಾಲೀಕರು ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ 1894ರ ಕಲಂ 18(1)ರಡಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಚಿಂಚೋಳಿ ಇಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಸಂಖ್ಯೆ 10/06 ಮತ್ತು 12/06 ನ್ಯಾಯಾಲಯವು ದಿನಾಂಕ 12-04-2009 ರಂದು ನೀಡಿರುವ ಆದೇಶದಲ್ಲಿ ಪರಿಹಾರ ಮೊತ್ತವನ್ನು ರೂ. 80,000/-ಗಳಿಗೆ ಹೆಚ್ಚಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಾನೂನು ಅಧಿಕಾರಿ, ಕಂದಾಯ ಇಲಾಖೆ ಇವರು ಪತ್ರ ಸಂಖ್ಯೆ: ಆರ್‌ಡಿ 810 ಎಲ್‌ಸಿಜಿ 2009, ದಿನಾಂಕ 09-06-2010ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನ್ಯಾಯಾಲಯದ ಆದೇಶದಂತೆ ಪರಿಹಾರ ನೀಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 156 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 24-03-2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆಯ ಬಲದಂಡೆ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸಾಲೇಬೀರನಹಳ್ಳಿ ಗ್ರಾಮಕ್ಕೆ ಸೇರಿದ ವಿವಿಧ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ:10/06 ಮತ್ತು 12/06ರಲ್ಲಿ ನೀಡಿದ ತೀರ್ಪಿನಂತೆ ರೂ. 2,06,489-00 (ಎರಡು ಲಕ್ಷದ ಆರು ಸಾವಿರದ ನಾಲ್ಕು ನೂರ ಎಂಬತ್ತೊಂಭತ್ತು ರೂಪಾಯಿಗಳು ಮಾತ್ರ)ಗಳ ಪರಿಹಾರ ಪಾವತಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

1) ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2) ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು "ಅಡಿಯಲ್ಲಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 105 ಅಕೋ-1/11, ದಿನಾಂಕ 10/03/11ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಪೂರಕ ಅನುದಾನ-III ರಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 911

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಕಮತನೂರು ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009-10/893, ದಿನಾಂಕ 09-02-2010.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಕಮತನೂರು ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಮತನೂರು ಗ್ರಾಮದ ಸ.ನಂ.ಗಳ ಜಮೀನುಗಳಿಗೆ ಹುಕ್ಕೇರಿ ಸಿವಿಲ್ ನ್ಯಾಯಾಲಯವು (ಹಿರಿಯ ವಿಭಾಗ) ನೀಡಿದ ಆದೇಶದಂತೆ ಹೆಚ್ಚುವರಿ ಪರಿಹಾರ ಪಾವತಿಸಲು ರೂ. 22,81,879/-ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 09-02-10ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 20-08-92ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳು ದಿನಾಂಕ 28-03-95ರಂದು ರಚಿಸಿದ ಐತೀರ್ಪಿನಂತೆ ಹಣ ಪಡೆದ ಭೂಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಹುಕ್ಕೇರಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ 77/01 ಮತ್ತು 82/01ನ್ನು ದಾಖಲಿಸಿದ್ದು ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯ ಕ್ರಮವಾಗಿ ದಿನಾಂಕ 20-11-08 ಮತ್ತು 29-11-08 ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆಗೆ ರೂ. 2.00 ಲಕ್ಷಗಳ ಬೆಲೆಯನ್ನು ನಿಗದಿಪಡಿಸಿದೆ ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹವಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ: ಆರ್‌ಡಿ 919 ಎಲ್‌ಸಿಬಿ 200 ಮತ್ತು ಆರ್‌ಡಿ 867 ಎಲ್‌ಸಿಬಿ 2009, ದಿನಾಂಕ 06-04-2009ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಪಾವತಿಸಿಬೇಕಾದ ಬಾಕಿ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್‌ಎಸಿ	ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	77/01	191/3, 191/4	1-14	1229265
2	82/01	293/3, 293/10	0-32	728453
			ಒಟ್ಟು	1957718

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 43 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 24-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಕಮತನೂರು ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ:71/01 ಮತ್ತು 82/01ರಲ್ಲಿ ನೀಡಿರುವ ಆದೇಶದ ಪರಿಹಾರ ಪಾವತಿಸಲು ರೂ. 19,16,384/-ಗಳ (ಹತ್ತೊಂಭತ್ತು ಲಕ್ಷದ ಹದಿನಾರು ಸಾವಿರದ ಮುನ್ನೂರು ಎಂಭತ್ತನಾಲ್ಕು ರೂಪಾಯಿಗಳು ಮಾತ್ರ) ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011ರಲ್ಲಿ ಒದಗಿಸಿರುವ ಪೂರಕ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 912 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು, ಹಸರಗುಂಡಗಿ ಕೆರೆ ಹಾಗೂ ಮುಖ್ಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 14-12-10ರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/6573.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಹಸರಗುಂಡಗಿ ಕೆರೆ ಹಾಗೂ ಮುಖ್ಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಹಸರಗುಂಡಗಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ಪತ್ರದಲ್ಲಿ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 06-11-2003
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ, ದಿನಾಂಕ 15-11-2006.

ಭೂಸ್ವಾಧೀನಕ್ಕೊಳಪಟ್ಟ ಜಮೀನಗಳ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಧನ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಚಿಂಚೋಳಿ ಸಿವಿಲ್ (ಹಿರಿಯ ವಿಭಾಗ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು ನ್ಯಾಯಾಲಯವು ಪ್ರತಿ ಎಕರೆ ರೂ. 90,000/-ಗಳನ್ನು ನಿಗಧಿಪಡಿಸಿ ಇತರೆ ಸವಲತ್ತುಗಳೊಂದಿಗೆ ಪಾವತಿಸಲು ಆದೇಶಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ:ಆರ್‌ಡಿ 811 ಎಲ್‌ಸಿಜಿ 2009, ದಿನಾಂಕ 09-06-10, ಆರ್‌ಡಿ 815 ಎಲ್‌ಸಿಜಿ 2009, ದಿನಾಂಕ 09-06-10, ಆರ್‌ಡಿ 813 ಎಲ್‌ಸಿಜಿ 2009, ದಿನಾಂಕ 09-06-10, ಆರ್‌ಡಿ 821 ಎಲ್‌ಸಿಜಿ 2009, ದಿನಾಂಕ 09-06-10, ಆರ್‌ಡಿ 812 ಎಲ್‌ಸಿಜಿ 2009, ದಿನಾಂಕ 09-06-10 ಮತ್ತು ಆರ್‌ಡಿ 809 ಎಲ್‌ಸಿಜಿ 2009, ದಿನಾಂಕ 09-06-10ರಲ್ಲಿ ಅಭಿಪ್ರಾಯ ನೀಡಿದೆ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್ಎಸಿ	ಹಸರಗುಂಡಗಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	29/08	101/3	0–10	41477
2	52/08	199/03	0–36	148538
3	51/08	122	0–16	66184
4	46/08	1/3	1–07	193834
5	42/08	5/10	0–10	41477
6	43/08	4/3	0–24	99136
7	44/08	3/3	0–18	74419
8	45/08	2/3	0–06	25006
9	48/08	180/03	0–30	123833
10	49/08	167/03	0–15	62064
11	50/08	166/05	0–08	33242
12	32/08	116/04	0–38	156775
13	36/08	5/9	0–13	53831
14	37/08	132/01	0–03	12653
15	38/08	132/02, 143/09	0–13	53831
16	28/08	139/03	0–30	123833
17	34/08	127/03	0–12	49712
18	35/08	128/03	0–15	62066
19	39/08	141/02	0–25	103242
			ಒಟ್ಟು	1525153

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 156 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 24-03-2011

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು, ಹಸರಗುಂಡಗಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳಲಾದ ಹಸರಗುಂಡಗಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 15,25,153-00 ಗಳನ್ನು (ಹದಿನೈದು ಲಕ್ಷದ ಇಪ್ಪತ್ತೈದು ಸಾವಿರದ ಒಂದು ನೂರ ಐವತ್ತೂರು ರೂ.ಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟು ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011ರಲ್ಲಿ ಒದಗಿಸಿರುವ ಪೂರಕ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 913

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ತಾಲ್ಲೂಕು ಅಂತಪನಾಳ ಗ್ರಾಮದ ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/4710, ದಿನಾಂಕ 18-08-10.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ತಾಲ್ಲೂಕು ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಂತಪನಾಳ ಗ್ರಾಮದ ಜಮೀನುಗಳಿಗೆ ಗುಲ್ಬರ್ಗಾದ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಆದೇಶಾನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ 18-08-10ರ ಪತ್ರದಲ್ಲಿ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರು ಕೋರಿದ್ದಾರೆ. ಪ್ರಕರಣದ ವಿವರಗಳು ಈ ಕೆಳಕಂಡಂತಿದೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 13-01-1994
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ, ದಿನಾಂಕ 18-07-1996.

ಭೂಸ್ವಾಧೀನಕ್ಕೊಳಪಟ್ಟ ಜಮೀನಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ದಾಖಲಿಸಿದ್ದ ಗುಲ್ಬರ್ಗಾದ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಭೂಸ್ವಾಧೀನಾಧಿಕಾರಿಗಳು ಉಚ್ಚ ನ್ಯಾಯಾಲಯದಲ್ಲಿ ಎಂಎಫ್ಎ ಸಂಖ್ಯೆ:2741/02ನ್ನು ಸಲ್ಲಿಸಿದ್ದು, ಈ ಮೇಲ್ಮನವಿಯು ದಿನಾಂಕ 16-07-02ರಂದು ವಜಾ ಮಾಡಿದೆ. ಎಲ್‌ಎಸಿ ಪ್ರಕರಣದಲ್ಲಿ ನಿಗದಿಪಡಿಸಿದ್ದ ಭೂಮಿಯ ಮೌಲ್ಯಕ್ಕೆ ತೃಪ್ತರಾಗದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಉಚ್ಚ ನ್ಯಾಯಾಲಯದಲ್ಲಿ ಎಂಎಫ್ಎ ಸಂಖ್ಯೆ: 5934/03ನ್ನು ಸಲ್ಲಿಸಿದ್ದು, ನ್ಯಾಯಾಲಯವು ಪ್ರತಿ ಎಕರೆಗೆ ರೂ. 60,000/-ಗಳನ್ನು ನಿಗದಿಪಡಿಸಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯ ಪತ್ರ ಸಂಖ್ಯೆ:ಲಾ 2354 ಎಲ್ಎಸ್‌ಪಿ 2007, ದಿನಾಂಕ 15-12-2007ರಲ್ಲಿ ಅಭಿಪ್ರಾಯ ನೀಡಿದೆ ಪಾವತಿಸಬೇಕಾದ ಪರಿಹಾರ ಧನದ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್‌ಎಸಿ ಸಂ.	ಎಂಎಫ್ಎ	ಅಂತಪನಾಳ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	1564/97	5934/03	29/2	7-00	3,67,567-00
				ಒಟ್ಟು	3,67,567-00

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 145 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 24-03-2011

ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ ತಾಲ್ಲೂಕು ಭೂಯ್ಯಾರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಅಂತಪನಾಳ ಗ್ರಾಮದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಲೆಕ್ಕಹಾಕಿದ ಪರಿಹಾರ ಮೊತ್ತ ರೂ. 3,67,567-00ಗಳನ್ನು (ಮೂರು ಲಕ್ಷದ ಅರವತ್ತೇಳು ಸಾವಿರದ ಐನೂರ ಅರವತ್ತೇಳು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸಿತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಸ್‌ಜಿ 2011, ದಿನಾಂಕ 19-03-2011ರಲ್ಲಿ ಒದಗಿಸಿರುವ ಪೂರಕ ಅನುದಾನ-III ರಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 914

ಇಂಧನ ಸಚಿವಾಲಯ

ವಿಷಯ : ಮೆ॥ ಎಕ್ಸ್‌ಎಸ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆಮಾಡಿರುವ 4 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಮೆ॥ ಪಾವನ ಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 272 ಎನ್‌ಸಿಇ 2009, ದಿನಾಂಕ 15-12-2009
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ: ಕೆಆರ್‌ಡಿಇ/06/ಎಸ್‌ಹೆಚ್-351/ಸಂಗಮ್ ಎಂಹೆಚ್‌ಎಸ್/2010/568, ದಿನಾಂಕ 03/11-02-2011.

ಪ್ರಸ್ತಾವನೆ :

ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಎಕ್ಸ್‌ಎಸ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ, ರಾಯಚೂರು ತಾಲ್ಲೂಕಿನ, ಗಿರಿಜಾಪುರ ಗ್ರಾಮದ ಬಳಿ ಕೃಷ್ಣ ನದಿಗೆ ಅಡ್ಡಲಾಗಿ 4.00 ಮೆ.ವ್ಯಾ. ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಎಕ್ಸ್‌ಎಸ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ರಾಯಚೂರು ಜಿಲ್ಲೆಯ, ರಾಯಚೂರು ತಾಲ್ಲೂಕಿನ, ಗಿರಿಜಾಪುರ ಗ್ರಾಮದ ಬಳಿ ಕೃಷ್ಣಾನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಮೆ॥ ಪಾವನ ಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರಿಗೆ ವರ್ಗಾಯಿಸಲು ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಶಿಫಾರಸ್ಸುಮಾಡಿ ಕಳುಹಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಸರ್ಕಾರದಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 136 ಎನ್‌ಸಿಇ 2011, ಬೆಂಗಳೂರು, ದಿನಾಂಕ : 21-3-2011

ಮೆ॥ ಎಕ್ಸ್‌ಎಸ್ ಹೈಡ್ರೋ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ರಾಯಚೂರು ತಾಲ್ಲೂಕಿನ, ಗಿರಿಜಾಪುರ ಗ್ರಾಮದ ಬಳಿ ಕೃಷ್ಣ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಮೆ॥ ಪಾವನ ಗಂಗಾ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರಿಗೆ ವರ್ಗಾಯಿಸಲು ಅನುಮತಿ ನೀಡಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಸರ್ಕಾರಿ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 915

ENERGY SECRETARIAT

Sub : Enhancement of capacity of wind power project from 8.00 MW to 15.2 MW in favour of M/s J.N. Investments & Trading Co. Pvt., Ltd.,-reg.

Read :
1. Govt. Order No. DE 41 NCE 2006, dated 20-04-2006
2. EN 400 NCE: 2010(1), dated 27-9-2010
3. Letter No. KRED/08/J.N.I (8.00 to 27.2)-JNI/2011/727, dated 28-2-2011/01-03-2011 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, permission has been accorded for implementation of 84.84 MW capacity Wind Power Project at Dharwad and Gadag Districts to M/s J.N. Investments & Trading Co. Pvt. Ltd.

In the Government Order read at (2) above, permission has been accorded for enhancement of 6.93 to 8.00 MW capacity Wind Power Project at Adavisomapura, Kalasapura and Malasamudra Villages of Gadag District to M/s J.N. Investments & Trading Co. Pvt. Ltd.

The Managing Director, Karnataka Renewable Energy Development Limited, Bangalore vide his letter read at (3) above has recommended to Government to enhance the wind power capacity from 8.00 MW to 27.2 MW capacity in favour of M/s J. N. Investments & Trading Co. Pvt. Ltd.

The proposal has been examined in detail at government level and decided to limit the enhancement capacity from 27.2 MW to 15.2 MW at this juncture. Hence the following Order.

Government Order No. : EN 148 NCE 2011, Bangalore, dated 23-03-2011

Government accords approval for enhancement of wind power capacity from 8.00 MW to 15.2 MW capacity in favour of M/s J. N. Investments & Trading Co. Pvt. Ltd. at Adavisomapura, Kalasapura, Malasamudra villages of Gadag District as detailed below:-

Geopraphical Area details	Villages and District	Sanctioned capacity in MW	Enhancement proposed in Stage-2 in MW	Total capacity in MW
The Proposed area is located on the North-East of Betgeri and South of Gadag. This area is spread around Nagasamudra and Adavi Somapura and has several peaks. It is held by the following Geographical co-ordinates: Latitude: 15°21'7"- 15°24'27"-N Longitude:75°36'30" 75°41'2"E Peaks: 673, 702, 747, 717, 709, 678.3m AMSL. Toposheet No.: 48 M/11	Adavisoma-pura, Kalasapura, Malasamudra villages, Gadag District	8.00	7.2	15.2

The Government has reserved the right to Cancel/modify this Order

The other terms and conditions of the allotment Order read at (1) above shall continue as it is.

By Order and in the name of the Governor of Karnataka
Suresh B. Krishnappanavar
Under Secretary to Government
Energy Department

P.R. 916

ENERGY SECRETARIAT

Sub : Transfer of 4.8 MW wind power capacity in favour of M/s Golden Hatcheries-reg.

Read :
1. Govt. Order No. DE 41 NCE 2006, dated 20-04-2006
2. Govt. Order No. EN 400 NCE 2010 (1), dated 27-09-2010
3. Govt. Order No. EN 148 NCE 2011, dated 23-03-2011
4. Letter No.: KRED/08/J.N.I. (8.00 to 27.2)-JNI/2011/727, dated 28-2-2011/01-03-2011 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, permission has been accorded for implementation of 84.84 MW capacity Wind Power Project at Dharwad and Gadag Districts to M/s J.N. Investments & Trading Co. Pvt. Ltd.

In the Government Order read at (2) above, sanction has been accorded for enhancement of Wind Power capacity from 6.93 MW (part capacity of 84.84 MW) to 8.00 MW at Adavisomapura, Kalasapura, Malasamudra villages of Gadag District in favour of M/s J.N. Investments & Trading Co. Pvt. Ltd.

In the Government Order read at (3) above, sanction has been accorded for enhancement of Wind Power capacity from 8.00 MW to 15.2 MW at Adavisomapura, Kalasapura, Malasamudra villages of Gadag District in favour of M/s J.N. Investments & Trading Co. Pvt. Ltd.

In the letter read at (4) above, the managing Director, Karnataka Renewable Energy Development Limited, Bangalore has recommended to the Government for transfer of 4.8 MW wind power capacity in favour of M/s Golden Hatcheries from out of the enhanced capacity of 15.2 MW of M/s J. N. Investments & Trading Co. Pvt. Ltd. at Adavisomapura, Kalasapura, malasamudra villages of Gadag District.

The proposal has been examined in detail and hence the following Order:-

Government Order No. : EN 148 NCE 2011 (1), Bangalore, dated 23-03-2011

Government accords approval for transfer of 4.8 MW wind power capacity in favour of M/s Golden Hatcheries from out of the enhanced capacity of 15.2 MW of M/s J. N. Investments & Trading Co. Pvt. Ltd. at Adavisomapura and Papanashi villages of Gadag District.

1. M/s Golden Hatcheries shall execute an agreement with Government within 45 (forty five) days from the date of issue of this Order.
2. Karnataka Power Transmission Corporation Limited to accord power evacuation and grid synchronization approvals.
3. Wheeling & Banking agreement is assigned to HESCOM, HESCOM shall execute the Wheeling & Banking agreement with M/s Golden Hatcheries.
4. The Government reserves the right to Cancel/modify this Order

The other terms and conditions of the Government Order read at (1) above shall IPSO FACTO applicable.

By Order and in the name of the Governor of Karnataka
Suresh B. Krishnappanavar
Under Secretary to Government
Energy Department

P.R. 917

ENERGY SECRETARIAT

Sub : Transfer of 1.6 MW wind power capacity in favour of M/s MBM Engineering Infotech Ltd.-reg.

Read :
1. Govt. Order No. DE 41 NCE 2006, dated 20-04-2006
2. Govt. Order No. EN 400 NCE 2010 (1), dated 27-09-2010
3. Govt. Order No. EN 148 NCE 2011, dated 23-03-2011
4. Letter No.: KRED/08/J.N.I. (8.00 to 27.2)-JNI/2011/727, dated 28-2-2011/01-03-2011 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, permission has been accorded for implementation of 84.84 MW capacity Wind Power Project at Dharwad and Gadag Districts to M/s J.N. Investments & Trading Co. Pvt. Ltd.

In the Government Order read at (2) above, sanction has been accorded for enhancement of Wind Power capacity from 6.93 MW (part capacity of 84.84 MW) to 8.00 MW at Adavisomapura, Kalasapura, Malasamudra villages of Gadag District in favour of M/s J.N. Investments & Trading Co. Pvt. Ltd.

ವಿಷಯ : ಭಾರತ ಸರಕಾರ ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 4(1) (ಬಿ) ಅನುಸಾರ ಡೆಪ್ಯೂಟಿ ಕಮೀಶನರ ಆಪ್ ಎಕ್ಸೈಜ್, ಕಛೇರಿ ವಿಜಾಪೂರಕ್ಕೆ ಸಂಬಂಧಿಸಿದಂತೆ 2010–11 ನೇ ಸಾಲಿನ ಅಂತ್ಯಕ್ಕೆ ಇದ್ದಂತೆ ಕಛೇರಿಯ ಮಾಹಿತಿಯನ್ನು ಕಾಲೋಚಿತಗೊಳಿಸಿ ಪ್ರಕಟಿಸುವ ಬಗ್ಗೆ.

ಭಾರತ ಸರ್ಕಾರವು ಜಾರಿಗೆ ತಂದಿರುವ 2005 ರ ಮಾಹಿತಿ ಹಕ್ಕು ಕಾಯ್ದೆಯಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005 (Central Act 22 of 2005) Section 5(1) (2) & 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು ಬಸವನ ಬಾಗೇವಾಡಿ ಕಛೇರಿ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸವಿಕರಿಸುವ ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಇಲಾಖೆಯ ಮುಖ್ಯಸ್ಥರ ಅಬಕಾರಿ ಉಪ ಆಯುಕ್ತರು ವಿಜಾಪೂರ ಕೆಳಕಂಡಂತೆ ನೇಮಿಸಿರುತ್ತಾರೆ.

ಕ್ರ ಸಂ.	ಕಛೇರಿಯ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ರ ಸೆಕ್ಷನ್ 5(1) (2) ರ ಪ್ರಕಾರ		ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ರ ಸೆಕ್ಷನ್ 19(1) ರ ಪ್ರಕಾರ ಮೇಲ್ಮನವಿ ಪ್ರಾಧಿಕಾರಿ.
		ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	
1.	ಅಬಕಾರಿ ನಿರೀಕ್ಷಕರ ಕಾರ್ಯಾಲಯ ಬಸವನ ಬಾಗೇವಾಡಿ ದೂರವಾಣಿ ಸಂಖ್ಯೆ : 08358–244474	ಅಬಕಾರಿ ನಿರೀಕ್ಷಕರ ಕಾರ್ಯಾಲಯ ಬಸವನ ಬಾಗೇವಾಡಿ ಮೊ:9448581247	ಅಬಕಾರಿ ಉಪ ನಿರೀಕ್ಷಕರ ಕಾರ್ಯಾಲಯ ಬಸವನ ಬಾಗೇವಾಡಿ ಮೊ:9611972299	ಅಬಕಾರಿ ಉಪ ಅಧೀಕ್ಷಕರು ವಿಜಾಪೂರ ಉಪ ವಿಭಾಗ ವಿಜಾಪೂರ ಮೊ:9448778593, 9449597168

ಕೇಂದ್ರ ಸರಕಾರವು ಜಾರಿಗೆ ತಂದಿರುವ 2005 ರ ಮಾಹಿತಿ ಹಕ್ಕು ಕಾಯ್ದೆ ಇದಾಗಿದ್ದು, ಸದರ ಕಾಯ್ದೆಯ ಕಲಂ 4(1) ರಡಿ ಒಟ್ಟು 16 ವಿವಿಧ ಅಂಶಗಳನ್ನೊಳಗೊಂಡ ಒಂದು ಕೈಪಿಡಿ ತಯಾರಿಸಬೇಕಾಗಿದ್ದು, ಈ ಕಛೇರಿಯ ಕಾರ್ಯಚಟುವಟಿಕೆಗಳ ಮಾಹಿತಿ ಈ ಕೆಳಕಂಡಂತಿದೆ.

ಅಬಕಾರಿ ನಿರೀಕ್ಷಕರು ಬಸವನಬಾಗೇವಾಡಿ ವಿಜಾಪೂರ ಜಿಲ್ಲೆ, ಮಾಹಿತಿ ಪಡೆಯಲು ಮಾಹಿತಿ ಹಕ್ಕು 2005 ರ ಅಧಿನಿಯಮದ ಅಧ್ಯಾಯ –2 ರ ಪರಿಚ್ಛೇಧ (ಸೆಕ್ಷೆನ್) 4(1) (ಎ) & (ಬಿ) (1) ರನ್ವಯ

1. ಇಲಾಖೆಯ ಪರಿಚಯ ಹಾಗೂ ಕಾರ್ಯಚಟುವಟಿಕೆಗಳನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ರಾಜ್ಯ ಅಬಕಾರಿ ಇಲಾಖೆಯು ಮೂಲತಃ ಸರಕಾರಕ್ಕೆ ರಾಜಸ್ವ ತರುವ ಪ್ರಮುಖ ಇಲಾಖೆಗಳಲ್ಲಿ ಒಂದಾಗಿದ್ದು, ರಾಜಸ್ವವನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಇಲಾಖೆಯು ವಿವಿಧ ಮಾದಕ ವಸ್ತುಗಳನ್ನು ಅಬಕಾರಿ ನಿಯಮಗಳಡಿ ನಿರೂಪಿಸಿರುವಂತೆ ಉತ್ಪಾದಿಸಿ ಅಧೀಕೃತವಾಗಿ ಮಾರಾಟ ಮಾಡಲು ವಿವಿಧ ನಮೂನೆಯ ಸನ್ನದುಗಳನ್ನು ನೀಡಿ ಅವುಗಳ ಕಾರ್ಯಚಟುವಟಿಕೆಗಳ ಮೇಲೆ ನಿಗಾ ಇಟ್ಟು ರಾಜಸ್ವ ಪೋಲಾಗದಂತೆ ನೋಡಿಕೊಳ್ಳಲು ಇಲಾಖೆಯು ಸಾಕಷ್ಟು ಅಬಕಾರಿ ನೌಕರರನ್ನು ಹೊಂದಿದ್ದು, ಅಬಕಾರಿ ನಿಯಮಗಳಲ್ಲಿ ನಿರೂಪಿಸಿರುವಂತೆ ವಿವಿಧ ಅಧಿಕಾರಿ ಸಿಬ್ಬಂದಿಗಳಿಗೆ ಅವರುಗಳದೇ ಆದ ಕರ್ತವ್ಯವನ್ನು ನೀಡಲಾಗಿರುತ್ತದೆ. ಅಲ್ಲದೇ ಸರ್ಕಾರವು ಕಾಲಕಾಲಕ್ಕೆ ಸದರ ಕರ್ತವ್ಯಗಳಲ್ಲಿ ಬದಲಾವಣೆಗಳನ್ನು ತಂದು ಹೊರಡಿಸುವ ಅಧಿಸೂಚನೆಗಳನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರುವುದು ಇಲಾಖೆಯ ಆದ್ಯ ಕರ್ತವ್ಯವಗಳಲ್ಲೊಂದಾಗಿದೆ.

2. ಅಬಕಾರಿ ನಿರೀಕ್ಷಕರು ಮತ್ತು ಉಪನಿರೀಕ್ಷಕರು ಲಿಪಿಕ ಸಿಬ್ಬಂದಿ ಅಬಕಾರಿ ಹಿರಿಯ ರಕ್ಷಕ ಮತ್ತು ರಕ್ಷಕರ ಕರ್ತವ್ಯಗಳು.

ಸರ್ಕಾರದ ಅಧಿಸೂಚನೆ ನಂ. :ಎಫ್.ಡಿ:42 ಇಪಿಎಸ್:07(1), ಬೆಂಗಳೂರು ದಿನಾಂಕ:24–03–2008 ರನ್ವಯ ಕಾರ್ಯಕಾರಿ ಅಧಿಕಾರಿಗಳು ಹಾಗೂ ನೌಕರುಗಳಿಗೆ ಅಧಿಕಾರ ಹಾಗೂ ಕರ್ತವ್ಯಗಳನ್ನು ಕೆಳಗಿನಂತೆ ಅದನ್ನು ಅನುಷ್ಠಾನಗೊಳಿಸುವುದಲ್ಲದೇ ಈ ಕಛೇರಿಯನ್ನೊಳಗೊಂಡಂತೆ ಕರ್ತವ್ಯಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ.

ಕ್ರ.ಸ.ಂ	ಅಧಿಕಾರಿ ನೌಕರರ ಪದನಾಮ	ಕರ್ತವ್ಯಗಳು
01	ಅಬಕಾರಿ ನಿರೀಕ್ಷಕರು	ತಾಲ್ಲೂಕಿನಲ್ಲಿ ಮುಖ್ಯಸ್ಥರಾಗಿದ್ದು, ವಲಯ ಕಛೇರಿ ಅಧೀನದಲ್ಲಿ ಬರುವ ಹಾಗೂ ಆಗು ಹೋಗುಗಳಿಗೆ ಇವರೇ ಜವಾಬ್ದಾರರಾಗಿರುತ್ತಾರೆ.
02	ಅಬಕಾರಿ ಉಪನಿರೀಕ್ಷಕರು	ಕಛೇರಿ ಆಡಳಿತ ನೇರ ಸಂಪರ್ಕವನ್ನು ಹೊಂದಿದ್ದು, ಅಬಕಾರಿ ನಿರೀಕ್ಷಕರ ನಿರ್ದೇಶನದಂತೆ ಕಾರ್ಯವನ್ನು ನಿರ್ವಹಿಸುವುದು.
03	ಅಬಕಾರಿ ಹಿರಿಯ ರಕ್ಷಕ ಹಾಗೂ ಅಬಕಾರಿ ರಕ್ಷಕ	ತಾಲೂಕಿಗೆ ಸಂಬಂಧಿಸಿದಂತೆ ಅಬಕಾರಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಜಾರಿ ಮತ್ತು ತನಿಖಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು. ಕೈಪಿಡಿಗೆ ಸಂಬಂಧಿಸಿದಂತೆ ವಲಯದ ಪ್ರತಿ ರಕ್ಷಕರಿಗೆ ಅಕ್ರಮಗಳನ್ನು ತಡೆಗಟ್ಟಲು ಭೀಟ ಮಾರ್ಗವಾಗಿ ನಿಯೋಜಿಸಿದ್ದು, ನಿಯೋಜಿಸಿದ ಭೀಟಗಳಲ್ಲಿ ಅಬಕಾರಿ ಪ್ರಕರಣಗಳು ಪತ್ತೆಯಾದಲ್ಲಿ ಹಳೆಯ ಆರೋಪಿಗಳ ಮೇಲೆ ನಿಗಾ ವಹಿಸುವುದು. ಆಕ್ರಮದ ಮಧ್ಯದಲ್ಲಿ ಕಂಡು ಬಂದಲ್ಲಿ ವಲಯ ತನಿಖಾಧಿಕಾರಿಗಳ ಗಮನಕ್ಕೆ ತರುವುದು.
04	ಅಬಕಾರಿ ದ್ವಿದ.ಸ	ಆವಕ, ಜಾವಕ ಸಿಬ್ಬಂದಿ ಸಂಕಲನ ಆಡಳಿತದ ಎಲ್ಲಾ ವಲಯಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಸಂಕಲಗಳನ್ನು ನೋಡಿಕೊಳ್ಳುವುದು.
05	ವಾಹನ ಚಾಲಕ	ಅಬಕಾರಿ ನಿರೀಕ್ಷಕರು ಹಾಗೂ ಉಪ ನಿರೀಕ್ಷಕರು ಇವರಿಗೆ ಅಬಕಾರಿ ದಾಳಿ ಮತ್ತು ಗಸ್ತು ಸಮಯದಲ್ಲಿ ವಾಹನ ಚಾಲನೆ ನಡೆಸುವುದು ಮತ್ತು ಜಾರಿಮತ್ತು ತನಿಖಾ ಕಾರ್ಯಗಳಲ್ಲಿ ನೆರವಾಗುವುದು.

3. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯು ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು.

ತಾಲೂಕಿನಲ್ಲಿ ಬರುವ ಅಧೀನ ಕಛೇರಿಯು ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯು ಅಬಕಾರಿ ನಿರೀಕ್ಷಕರು ಬಸವನ ಬಾಗೇವಾಡಿ ಇವರ ಮೇಲಿದ್ದು, ಯಾವುದೇ ವಿಷಯಗಳಲ್ಲಿ ತಾಲೂಕಿನಲ್ಲಿ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನಿಯಮಗಳಡಿ ನಿರೂಪಿಸುವಂತೆ ಕಾರ್ಯವಿಧಾನವನ್ನು ಅನುಸರಿಸಲಾಗುತ್ತಿದೆ.

4. ಅದರ ಕರ್ತವ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು:

ಅಬಕಾರಿ ಇಲಾಖೆಯು ಕರ್ತವ್ಯಗಳ ನಿರ್ವಹಣೆಗಾಗಿ ಅಬಕಾರಿ ಕಾಯ್ದೆ 1965 ಹಾಗೂ ವಿವಿಧ ನಿಯಮಗಳು ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆಗಳು ಮತ್ತು ಸುತ್ತೋಲೆಗಳು ಸರಕಾರಿ ಆದೇಶಗಳನ್ವಯ ವಿವಿಧ ಸೂತ್ರಗಳನ್ನು ರೂಪಿಸಲಾಗಿರುತ್ತವೆ.

5. ಅದರ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು ವಿನಿಮಯಗಳೂ ಅನುಸೂಚಿಗಳು ಕೈಪಿಡಿಗಳು ಮತ್ತು ದಾಖಲೆಗಳೇನು.

ಅಬಕಾರಿ ಇಲಾಖೆಯು ಕಾರ್ಯಗಳನ್ನು ನಿರ್ವಹಿಸುವದಕ್ಕಾಗಿ ಅದು ಹೊಂದಿರುವ ಹಾಗೂ ಅದರ ನಿಯಂತ್ರಣದಲ್ಲಿರುವ ಅದರ ಉದ್ಯೋಗಿಗಳು ಕರ್ನಾಟಕ ಅಬಕಾರಿ ಕಾಯ್ದೆ 1965 ಹಾಗೂ ವಿವಿಧ ನಿಯಮಗಳು ಹಾಗೂ ಕಾಲ ಕಾಲಕ್ಕೆ ಹೊರಡಿಸಿರುವ ಅಧಿಸೂಚನೆ ಮತ್ತು ಸುತ್ತೋಲೆಗಳು ಸರಕಾರಿ ಆದೇಶಗಳು ಇತ್ಯಾದಿ ದಾಖಲೆಗಳನ್ನು ಹೊಂದಿರುತ್ತದೆ.

6. ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ ಏನು.

1. ಸೇವಾ ಪುಸ್ತಕಗಳು (ಗ್ರೂಪ್ ಸಿ & ಡಿ ನೌಕರರಿಗೆ ಸಂಬಂಧಿಸಿದ್ದವು)
2. ಸಾಮಾನ್ಯ ಸ್ವೀಕೃತಿ ವಹಿ
3. ರವಾನಿ ವಹಿ
4. ಸ್ಟಾಂಪ್ ವಹಿ
5. ನಗದು ಪುಸ್ತಕ
6. ಹಾಜರಿ ಪುಸ್ತಕ
7. ಖರ್ಚುವೆಚ್ಚಗಳ ಪುಸ್ತಕ
8. ಡಿ.ಸಿ ಬಿಲ್ ಪುಸ್ತಕ
9. ಚೆಕ್ ಸ್ವೀಕೃತಿ ಪುಸ್ತಕ
10. ವೇತನ ಪಾವತಿ ಪುಸ್ತಕ
11. ಪೀಠೋಪಕರಣಗಳು ಹಾಗೂ ಇತರ ಸಾಮಗ್ರಿಗಳ ವಹಿ
12. ಕಛೇರಿಯ ಆದೇಶದ ಪುಸ್ತಕ
13. ಸಿಬ್ಬಂದಿಗಳ ರಜೆಯ ಲೆಕ್ಕಗಳು
14. ಗ್ರಂಥಾಲಯ ವಹಿ
15. ಕ್ರೈಂ ರಜಿಸ್ಟರ್
16. ಮುದ್ದೇಮಾಲು ಜಪ್ತ ರಜಿಸ್ಟರ್
17. ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವ ವಸ್ತುಗಳ & ವಿಲೇವಾರಿ ಕುರಿತು ರಜಿಸ್ಟರ್.
18. ಮಿಸಲೇನಿಯಸ್ ರಜಿಸ್ಟರ್.
19. ಅಬಕಾರಿ ವಸ್ತುಗಳ ನಿಗಧಿತ ಗುರಿ ಸಾಧನೆಯ ಪ್ರಗತಿ ರಜಿಸ್ಟರ್
20. ಅಬಕಾರಿ ರಾಜಸ್ವ ಸಂಗ್ರಹಣೆ ರಜಿಸ್ಟರ್.

7. ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು.

ಅಬಕಾರಿ ಇಲಾಖೆ ಕಾರ್ಯವು ನಿಗಧಿತ ರಾಜ್ಯ ಅಬಕಾರಿ ಕಾಯ್ದೆ ಕೈಪಿಡಿಯಲ್ಲಿ ನೀಡಿದ ಸೂಚನೆಗಳನ್ವಯ ಕಾರ್ಯನಿರ್ವಹಿಸಬೇಕಾಗಿದ್ದು, ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮಾಡುವ ಸಂದರ್ಭ ಬರುವುದಿಲ್ಲ.

8. ಮಂಡಳಿಗಳು ಪರಿಷತ್ತುಗಳು ಸಮೀತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರತ್ತುಗಳು ಸಮೀತಿಗಳ ಮತ್ತು ಇತರೆ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತಾಯವಾಗಿರುತ್ತವೆಯೆ ಅಥವಾ ಅಂತಹ ಸಭೆಯ ನಡುವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ ಏನು.

ಅಕ್ರಮ ಮಧ್ಯ ಮಾರಾಟ (ಕಳ್ಳಭಟ್ಟಿ ಸಾರಾಯಿ, ನಕಲಿ ಮಧ್ಯ), ದಿಂದಾಗುವ ದುಷ್ಪರಿಣಾಮಗಳ ಕುರಿತು ಗ್ರಾಮ ಸಭೆಗಳನ್ನು ನಡೆಸುತ್ತಿದ್ದು ಆದರೆ ಕಛೇರಿಯ ಕಾರ್ಯ ನೀತಿಯು ಗುಪ್ತವಾಗಿದ್ದ ಕಾರಣ ಸಾರ್ವಜನಿಕರಿಗೆ ಸಭೆಯ ನಡುವಳಿಗಳನ್ನು ನೀಡಲು ಅವಕಾಶವಿರುವುದಿಲ್ಲ.

9. ಅಧಿಕಾರಿಗಳು ಹಾಗೂ ನೌಕರರ ನಿರ್ದೇಶಿಕೆ ಏನು :

ಸರ್ಕಾರದ ಆದೇಶ ಸಂಖ್ಯೆ : ಎಫ್.ಡಿ/42/ಇಪಿಎಸ್/2007(1), ಬೆಂಗಳೂರು ದಿನಾಂಕ : 24 ನೇ ಮಾರ್ಚ್ 2008.

ಅಬಕಾರಿ ಇಲಾಖೆಯ ಕಾರ್ಯನಿರ್ವಾಹಕ ಕ್ಷೇತ್ರಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು.

ಅಬಕಾರಿ ನಿರೀಕ್ಷಕರು	1. ಸನ್ನದು ಅಂಗಡಿಗಳ ತಪಾಸಣೆ
	2. ರಹದಾರಿ ಪತ್ರ ನೀಡುವುದು.
	3. ಕರ್ನಾಟಕ ಅಬಕಾರಿ ಕಾಯ್ದೆ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವುದು.

	4. ಅಬಕಾರಿ ಉಪ ಆಯುಕ್ತರ ನಿರ್ದೇಶನದಂತೆ ಹಳೆ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವುದು.
	5. ಅಬಕಾರಿ ವಸ್ತುಗಳ ಬಳಕೆಯನ್ನು ಅಭಿವೃದ್ಧಿಗೊಳಿಸುವುದು.
	6. ಕಳ್ಳಭಟ್ಟಿ ನಕಲಿ ಮದ್ಯ ತಯಾರಿಕೆ ಸಂಗ್ರಹಣೆ ಸಾಗಾಣಿಕೆ ಮತ್ತು ತೆರಿಗೆ ರಹಿತ ರೆಕ್ಟಿಫೈಡ್ ಸ್ಪಿರಿಟ್ ಶೇಂದಿ ಮಾದಕ ವಸ್ತುಗಳ ಮಾರಾಟವನ್ನು ತಡೆಗಟ್ಟುವುದು.
	7. ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಜಾರಿ ಮತ್ತು ತನಿಖಾ ಕಾರ್ಯಗಳ ಸಂಘಟನೆ ಮತ್ತು ಮೇಲುಸ್ತುವಾರಿ ಕಾರ್ಯ (ಗುಪ್ತ ಮಾಹಿತಿ ಸಂಗ್ರಹಣೆ ರಸ್ತೆ ಗಸ್ತು ರಾತ್ರಿಕಾವಲು ಕಳ್ಳಭಟ್ಟಿ ಕೇಂದ್ರಗಳು ಹಾಗೂ ನಕಲಿ ಮದ್ಯ ತಯಾರಿಕಾ ಕೇಂದ್ರಗಳ ಮೇಲೆ ಅಬಕಾರಿ ದಾಳಿ ಇತರೆ).
	8. ಅಬಕಾರಿ ಉಪ ನಿರೀಕ್ಷಕರು ಅಬಕಾರಿಹಿರಿಯ ರಕ್ಷಕರು ಹಾಗೂ ರಕ್ಷಕರ ಕಾರ್ಯನಿರ್ವಹಣೆಯ ಮೇಲುಸ್ತುವಾರಿ ಹಾಗೂ ಮಾರ್ಗದರ್ಶನ ನೀಡುವುದು.
	9. ಕಾನೂನಿನ್ವಯ ಚಾರ್ಜಶೀಟ ಮಾಡಿದಂತಹ ಪ್ರಕರಣಗಳನ್ನು ವಿಲೇವಾರಿಗೊಳಿಸಲು ಜರೂರ ಕ್ರಮ ಕೈಗೊಳ್ಳುವುದು.
	10. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 ರ ಅಡಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಪ್ರಾಧೀಕೃತ ಅಧಿಕಾರಿಗಳೊಂದಿಗೆ ಸಹಕರಿಸುವುದು.
	11. ಕರ್ನಾಟಕ ಅಬಕಾರಿ ಕಾಯ್ದೆ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲು ಮಾಡಿ ತನಿಖೆ ಮುಗಿಸಿ ನ್ಯಾಯಾಲಯದಲ್ಲಿ ಅಂತಿಮ ಆರೋಪ ಪಟ್ಟಿಯನ್ನು ಸಲ್ಲಿಸುವುದು.
	12. ಹಳೇ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಬಾಕಿದಾರರ ಆಸ್ತಿಯನ್ನು ಗುರುತಿಸಿ ಅವರ ಮೇಲೆ ಕ್ರಮ ಕೈಗೊಳ್ಳಲು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಹಕರಿಸುವುದು.
	13. ವಿಲೇವಾರಿಯಾಗದ ಅಡಿಟ್ ಪ್ಯಾರಾ (ಸ್ಥಳೀಯ ಮತ್ತು ಅಂತರಿಕ) ಗಳನ್ನು ವಿಲೇವಾರಿಗೊಳಿಸಲು ಸೂಕ್ತ ಕ್ರಮಕೈಗೊಳ್ಳುವುದು.
	14. ವಲಯ ವ್ಯಾಪ್ತಿಯಲ್ಲಿ ಅಬಕಾರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ಗುಪ್ತ ಮಾಹಿತಿ ಸಂಗ್ರಹಿಸುವುದು. ವಲಯವಾರು ವಿವರಗಳನ್ನು ಸಂಗ್ರಹಿಸುವುದು ಹಾಗೂ ಅಬಕಾರಿ ಅಪರಾಧಗಳಲ್ಲಿ ತೊಡಗಿರುವ ಸಮಾಜ ಘಾತುಕ ವ್ಯಕ್ತಿಗಳ ಪೂರ್ವೋತ್ತರ ದಸ್ತಾವೇಜುಗಳನ್ನು ಕಾಯ್ದೆಯಡಿ ಜರುಗಿಸಲು ಸಹಕರಿಸುವುದು.
	15. ತಾಲ್ಲೂಕುಮಟ್ಟದ ಪೋಲಿಸ್ ಅಧಿಕಾರಿಗಳೊಂದಿಗೆ ಸಂಪರ್ಕ ಹೊಂದಿ ಗುಪ್ತ ಮಾಹಿತಿ ವಿಚಾರ ವಿನಿಮಯ ಮಾಡಿಕೊಂಡು ಅದರಂತೆ ಕಾರ್ಯಾಚರಣೆ ನಡೆಸುವುದು ಗುಪ್ತ ಮಾಹಿತಿಯನ್ನು ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ಇವರಿಗೆ ನೀಡುವುದು.
ಅಬಕಾರಿ ಉಪ ನಿರೀಕ್ಷಕರು	1. ಸನ್ನದು ಅಂಗಡಿಗಳ ತಪಾಸಣೆ
	2. ಕರ್ನಾಟಕ ಅಬಕಾರಿ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವುದು.
	3. ಅಬಕಾರಿ ಉಪ ಆಯುಕ್ತರ ನಿರ್ದೇಶನದಂತೆ ಹಳೇ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವುದು.
	4. ಅಬಕಾರಿ ವಸ್ತುಗಳ ಬಳಕೆಯನ್ನು ಅಭಿವೃದ್ಧಿಗೊಳಿಸುವುದು.
	5. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕೈಗೊಳ್ಳುವ ಜಾರಿ ಮತ್ತು ತನಿಖಾ ಕಾರ್ಯಗಳ ಸಂಘಟನೆ ಮತ್ತು ಮೇಲುಸ್ತುವಾರಿ ಕಾರ್ಯ (ಗುಪ್ತ ಮಾಹಿತಿ ಸಂಗ್ರಹಣೆ ರಸ್ತೆ ಗಸ್ತು ರಾತ್ರಿ ಕಾವಲು ಕಳ್ಳಭಟ್ಟಿ ಕೇಂದ್ರಗಳು ಹಾಗೂ ನಕಲಿ ಮದ್ಯ ತಯಾರಿಕಾ ಕೇಂದ್ರಗಳ ಮೇಲೆ ಅಬಕಾರಿ ದಾಳಿ ಇತರೆ).
	6. ಕಳ್ಳಭಟ್ಟಿ ನಕಲಿ ಮದ್ಯ ತಯಾರಿಕೆ ಸಂಗ್ರಹಣೆ ಸಾಗಾಣಿಕೆ ಮತ್ತು ತೆರಿಗೆ ರಹಿತ ರೆಕ್ಟಿಫೈಡ್ ಸ್ಪಿರಿಟ್ ಶೇಂದಿ ಮಾದಕ ವಸ್ತುಗಳ ಮಾರಾಟವನ್ನು ತಡೆಗಟ್ಟುವುದು.
	7. ಗಾಂಜಾ ಗಿಡ ಬೆಳೆಸುವುದು ಅಥವಾ ಇತರೆ ಯಾವುದೇ ಮಾದಕ ವಸ್ತುಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಹಾಗೂ ದಾಖಲೆಗಳ ನಿರ್ವಹಣೆ
	8. ಕಾನೂನಿನ್ವಯ ಚಾರ್ಜ ಶೀಟ ಮಾಡಿದಂತಹ ಪ್ರಕರಣಗಳನ್ನು ವಿಲೇವಾರಿಗೊಳಿಸಲು ಜರೂರ ಕ್ರಮ ಕೈಗೊಳ್ಳುವುದು.
	9. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 ರ ಅಡಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಪ್ರಾಧಿಕೃತ ಅಧಿಕಾರಿಗಳಿಗೆ ಸಹಕರಿಸುವುದು.

ಅಬಕಾರಿ ಹಿರಿಯ ರಕ್ಷಕ	1.	ಕಾರ್ಯವ್ಯಾಪ್ತಿಯಲ್ಲಿನ ಜಿಲ್ಲೆಗಳ ಅಬಕಾರಿ ಅಪರಾಧಗಳಿಗೆ ಸಂಬಂಧಿಸಿದಂತೆ ತಡೆಗಟ್ಟಲು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಜಿಲ್ಲೆಗಳ ವ್ಯಾಪ್ತಿಯಲ್ಲಿ ಜಾರಿ ಮತ್ತು ತನಿಖೆ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸಿ ಅಪರಾಧಗಳನ್ನು ತಡೆಗಟ್ಟುವಲ್ಲಿ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
	2.	ಪ್ರತಿದಿನ ಕಾರ್ಯ ವ್ಯಾಪ್ತಿಯಲ್ಲಿ ಅಬಕಾರಿ ಚಟುವಟಿಕೆ ಹಾಗೂ ಅಪರಾಧಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಿ ತನ್ನ ಅಧೀನ ಸಿಬ್ಬಂದಿಯವರಿಗೆ ಸೂಕ್ತ ಕ್ರಮಕ್ಕಾಗಿ ಆದೇಶಿಸಿ ಅಪರಾಧಗಳನ್ನು ತಡೆಗಟ್ಟುವಲ್ಲಿ ಕಾರ್ಯೋನ್ಮುಖರಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.
	3.	ಪ್ರತಿದಿನ ತಮ್ಮ ಕಾರ್ಯ ವ್ಯಾಪ್ತಿಯಲ್ಲಿನ ಅಬಕಾರಿ ಚಟುವಟಿಕೆ ಹಾಗೂ ಅಪರಾಧಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಿ ಅದನ್ನು ಅಬಕಾರಿ ಆಯುಕ್ತರ ಕಛೇರಿಯ ಅಪರ ಅಬಕಾರಿ ಆಯುಕ್ತರು (ಅಪರಾಧ ಮತ್ತು ಜಾರಿ) ಯವರಿಗೆ ಪ್ಯಾಕ್ಸ ಅಥವಾ ದೂರವಾಣಿ ಮೂಲಕ ಒದಗಿಸತಕ್ಕದ್ದು.
ಅಬಕಾರಿ ರಕ್ಷಕರು	1.	ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಗಸ್ತು ತಿರುಗಿ ಕರ್ನಾಟಕ ಅಬಕಾರಿ ಕಾಯ್ದೆ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿ ತಮ್ಮ ಮೇಲಾಧಿಕಾರಿಗಳಿಗೆ ಒದಗಿಸುವುದು.
	2.	ಪ್ರಥಮ ಮಾಹಿತಿ ವರದಿ ಅಂತಿಮ ದೋಷಾರೋಪಣಾ ಪಟ್ಟಿ, ಸಿಸಿ ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವುದು, ಸಿಸಿ ನಂ. ಸಮನ್ಸ ನ್ಯಾಯಾಲಯದಿಂದ ಪಡೆದು ಸಮನ್ಸಗಳನ್ನು ಸಾಕ್ಷಿದಾರರಿಗೆ ಹಾಗೂ ಆರೋಪಿತರಿಗೆ ಜಾರಿಗೊಳಿಸುವುದು.
	3.	ದಸ್ತಗಿರಿ ಮಾಡಲಾದ ಅಪರಾಧಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಸಂದರ್ಭದಲ್ಲಿ ಅಪರಾಧಿಯನ್ನು ಕಾರಾಗೃಹಕ್ಕೆ ಒಪ್ಪಿಸುವುದು ಅಪರಾಧಿಯ ಸುರಕ್ಷತೆ ಹಾಗೂ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದು.
	4.	ಅಬಕಾರಿ ದಾಳಿ ಸಂದರ್ಭದಲ್ಲಿ ಸನ್ನದು ಅಂಗಡಿಗಳ ತಪಾಸಣೆ ಸಮಯದಲ್ಲಿ ರಾತ್ರಿ ಗಸ್ತು ಮತ್ತು ರಸ್ತೆಗಾವಲು ಸಂದರ್ಭದಲ್ಲಿ ಅಕ್ರಮ ಸಾಗಾಣಿಕೆ ಸಂಗ್ರಹಣೆ ಅಕ್ರಮ ಮಾರಾಟ ಸಂದರ್ಭಗಳಲ್ಲಿ ಅಬಕಾರಿ ವಸ್ತುಗಳು ಹಾಗೂ ವಾಹನಗಳನ್ನು ವಶಪಡಿಸಿಕೊಳ್ಳಲು ತನಿಖಾಧಿಕಾರಿಗಳಿಗೆ ಸಹಾಯ ಮಾಡುವುದು ಹಾಗೂ ವಶಪಡಿಸಿಕೊಂಡ ವಸ್ತುಗಳು ಹಾಗೂ ವಾಹನಗಳನ್ನು ಸುರಕ್ಷತೆ ಬಗ್ಗೆ ಪ್ರಕರಣ ಮುಗಿಯುವವರೆಗೆ ನಿಗಾ ವಹಿಸುವುದು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಲು ತನಿಖಾಧಿಕಾರಿಗಳಿಗೆ ಸಹಾಯ ಮಾಡುವುದು.
	5.	ರಸಾಯನಿಕ ಮಾದರಿಗಳನ್ನು ರಸಾಯನಿಕ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ ಪರೀಕ್ಷೆಯ ನಂತರ ವರದಿ ತರುವುದು.
	6.	ಸಾರ್ವಜನಿಕ ಸ್ಥಳಗಳಲ್ಲಿ ಇರುವಂತಹ ಅಕ್ರಮ ಅಬಕಾರಿ ವಸ್ತುಗಳನ್ನು ವಶಪಡಿಸಿಕೊಂಡು ಮುಂದಿನ ಸೂಕ್ತ ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ಒಪ್ಪಿಸುವುದು.
	7.	ಪ್ರಾದೇಶಿಕ ಸಾರಿಗೆ ಕಛೇರಿಯಿಂದ ವಶಪಡಿಸಿಕೊಂಡ ವಾಹನದ ಬಿ ಎಕ್ಸ್‌ಟ್ರ್ಯಾಕ್ಟ್ ಪ್ರತಿಯನ್ನು ತರುವುದು. ಕಛೇರಿಗೆ ಸಂಬಂಧಿಸಿದ ಟಪಾಲನ್ನು ನಿಗಧಿಪಡಿಸಿದ ವಿಳಾಸಕ್ಕೆ ತಲುಪಿಸುವುದು ಮತ್ತು ತರುವುದು.
	8.	ಕರ್ತವ್ಯದಲ್ಲಿರುವ ಸಮಯದಲ್ಲಿ ಸಮವಸ್ತ್ರ ಹಾಗೂ ಇಲಾಖೆ ನೀಡಿರುವ ಸುರಕ್ಷತಾ ವಸ್ತುಗಳನ್ನು ಹೊಂದಿರತಕ್ಕದ್ದು.
	9.	ಅಬಕಾರಿ ಪ್ರಕರಣಗಳಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸ್ವತ್ತನ್ನು ವಿಲೇವಾರಿ/ನಾಶ ಮಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸಿ ಕಾರ್ಯನಿರ್ವಹಿಸುವುದು.
	10.	ಕರ್ತವ್ಯ ನಿರ್ವಹಿಸಿರುವ ಬಗ್ಗೆ ಮಾಹಿತಿಗಳನ್ನು ಕ್ರಮ ಬದ್ಧವಾಗಿ ಒಂದು ಪುಸ್ತಕದಲ್ಲಿ ಬರೆದು ನಿರ್ವಹಿಸತಕ್ಕದ್ದು.
ವಾಹನ ಚಾಲಕರು	1.	ಕರ್ತವ್ಯದಲ್ಲಿರುವ ಸಮಯದಲ್ಲಿ ಸಮವಸ್ತ್ರ ಧರಿಸುವುದು.
	2.	ಅಬಕಾರಿ ದಾಳಿಯ ಸಮಯದಲ್ಲಿ ಸಂಧಿಗ್ಧ ಪರಿಸ್ಥಿತಿಯ ಸಮಯದಲ್ಲೂ ವಾಹನದ ಸುರಕ್ಷತೆಯನ್ನು ಸಾಧ್ಯವಾದಷ್ಟು ನಿರ್ವಹಿಸತಕ್ಕದ್ದು.
	3.	ವಾಹನವನ್ನು ಎಲ್ಲಾ ಸಮಯದಲ್ಲೂ ಉತ್ತಮ ಹಾಗೂ ಚಾಲನಾ ಸ್ಥಿತಿಯಲ್ಲಿ ಇಡತಕ್ಕದ್ದು.
	4.	ವಾಹನದ ಲಾಗ್ ಪುಸ್ತಕವನ್ನು ನಿರ್ವಹಿಸುವುದು.
	5.	ವಾಹನದಲ್ಲಿ ಉದ್ಭವಿಸಬಹುದಾದ ತೊಂದರೆಗಳನ್ನು ಪತ್ತೆ ಹಚ್ಚಿ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಿ ವಾಹನವನ್ನು ಸುಸ್ಥಿತಿಯಲ್ಲಿ ಇಡತಕ್ಕದ್ದು.

	6. ನಿಗದಿತ ಸಮಯಕ್ಕೆ ಸರಿಯಾಗಿ ವಾಹನ ವಿಮೆಯನ್ನು ನವೀಕರಣಗೊಳಿಸುವುದು.
	7. ವಾಹನ ದುರಸ್ತಿಗೆ ಸಂಬಂಧಿಸಿದಂತೆ ಅಧಿಕೃತ ಸಂಸ್ಥೆಗಳಿಂದ ದರಪಟ್ಟಿಯನ್ನು ತರುವುದು.
	8. ಅಧಿಕಾರಿಗಳು ನಿರ್ದೇಶನದಂತೆ ನಿಗಧಿಪಡಿಸಿದ ಯಾವುದೇ ಸ್ಥಳ/ಸಮಯದಲ್ಲಿ ವಾಹನದೊಂದಿಗೆ ಹಾಜರಿರುವುದು.

ಅಬಕಾರಿ ನಿರೀಕ್ಷಕರ ಕಾರ್ಯಾಲಯ ಬಸವನ ಬಾಗೇವಾಡಿ ಕಛೇರಿಯ ಸಿಬ್ಬಂದಿಯ ವಿವರ ಈ ಕೆಳಗಿನಂತಿರುತ್ತದೆ.

ಅ. ನಂ	ಹುದ್ದೆಯ ಹೆಸರು	ಅಧಿಕಾರಿ ನೌಕರರ ಹೆಸರು	ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
01	ಅಬಕಾರಿ ನಿರೀಕ್ಷಕರು	ಡಿ.ಎಸ್.ಚವ್ಹಾಣ	01	01	–
02	ಅಬಕಾರಿ ಉಪನಿರೀಕ್ಷಕರು	ಜಿ.ಎಸ್.ಪಾಟೀಲ	02	01	01
03	ಅಬಕಾರಿ ದ್ವಿ.ದ.ಸಹಾಯಕ	ಎಮ್.ಎಸ್.ಮೋಟಗಿ	01	01	–
04	ಅಬಕಾರಿ ಹಿರಿಯ ರಕ್ಷಕ	ಎ.ಎಚ್.ಭಾಗವಾನ	01	01	–
05	ಅಬಕಾರಿ ರಕ್ಷಕ	ಎಸ್.ಡಿ.ಜೋಶಿ	07	07	–
06	ಅಬಕಾರಿ ರಕ್ಷಕ	ಎನ್.ಆರ್.ಪಾಟೀಲ			
07	ಅಬಕಾರಿ ರಕ್ಷಕ	ಎ.ಎಮ್.ಪತ್ತಾರ			
08	ಅಬಕಾರಿ ರಕ್ಷಕ	ಬಿ.ಪಿ.ತಳಕೇರಿ			
09	ಅಬಕಾರಿ ರಕ್ಷಕ	ಬಿ.ಎಸ್.ನಾಗಠಾಣ			
10	ಅಬಕಾರಿ ರಕ್ಷಕ	ಎಸ್.ಎ.ಹುಂಡೇಕಾರ			
11	ಅಬಕಾರಿ ರಕ್ಷಕ	ಆಯ್.ಡಿ.ಹಾದಿಮನಿ			

10. ಆದರೆ ವಿನಿಮಯಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನವೇನು;

ಕ್ರ.ಸಂ.	ಹುದ್ದೆಯ ಹೆಸರು	ಅಧಿಕಾರಿ, ನೌಕರರ ಹೆಸರು	ವೇತನ ಶ್ರೇಣಿ ರೂ	ಮೂಲವೇತನ
01	ಅಬಕಾರಿ ನಿರೀಕ್ಷಕರು	ಡಿ.ಎಸ್.ಚವ್ಹಾಣ	9500–17250	11,400
02	ಅಬಕಾರಿ ಉಪನಿರೀಕ್ಷಕರು	ಜಿ.ಎಸ್.ಪಾಟೀಲ	8000–14800	8600
03	ಅಬಕಾರಿ ದ್ವಿ.ದ.ಸಹಾಯಕ	ಎಮ್.ಎಸ್.ಮೋಟಗಿ	5800–10500	6950
04	ಅಬಕಾರಿ ಹಿರಿಯ ರಕ್ಷಕ	ಎ.ಎಚ್.ಭಾಗವಾನ	6250–12000	11,400
05	ಅಬಕಾರಿ ರಕ್ಷಕ	ಎಸ್.ಡಿ.ಜೋಶಿ	5800–10500	6800
06	ಅಬಕಾರಿ ರಕ್ಷಕ	ಎನ್.ಆರ್.ಪಾಟೀಲ	5800–10500	8200
07	ಅಬಕಾರಿ ರಕ್ಷಕ	ಎ.ಎಮ್.ಪತ್ತಾರ	5800–10500	7800
08	ಅಬಕಾರಿ ರಕ್ಷಕ	ಬಿ.ಪಿ.ತಳಕೇರಿ	5800–10500	8200
09	ಅಬಕಾರಿ ರಕ್ಷಕ	ಬಿ.ಎಸ್.ನಾಗಠಾಣ	5800–10500	7800
10	ಅಬಕಾರಿ ರಕ್ಷಕ	ಎಸ್.ಎ.ಹುಂಡೇಕಾರ	5800–10500	8200
11	ಅಬಕಾರಿ ರಕ್ಷಕ	ಆಯ್.ಡಿ.ಹಾದಿಮನಿ	5800–10500	8600

11. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಾಸ್ತಾವಿಕ ವೆಚ್ಚವನ್ನು ಮತ್ತು ಮಾಡಲಾದ ಚಟುವಟಿಕೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ ಏನು.

ಅನ್ವಯಿಸುವುದಿಲ್ಲ.

12. ಹಂಚಿಕೆ ಮಾಡಲಾದ ಮೊಬಗಲುಗುಗಳನ್ನೊಳಗೊಂಡ ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಫಲಾನುಭವಿಗಳಿಗೆ ವಿವರಗಳೇನು.

ಅಬಕಾರಿ ಇಲಾಖೆಗೆ ಅಬಕಾರಿ ಅಕ್ರಮ ಚಟುವಟಿಕೆಗಳ ಕುರಿತು ಮಾಹಿತಿಯನ್ನು ನೀಡಿದ ಮಾಹಿತಿದಾರರಿಗೆ ಗುಪ್ತನಿಧಿಯಿಂದ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಮತ್ತು ಸದರಿಯವರ ಹೆಸರುಗಳ ಗೌಪ್ಯತೆಯನ್ನು ಕಾಯ್ದುಕೊಳ್ಳಲಾಗುತ್ತಿದೆ. ಇದಲ್ಲದೇ ಅಬಕಾರಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಮೌಲ್ಯಾಧಾರಿತ ಗುನ್ಹೆಯನ್ನು ದಾಖಲಿಸಿದಲ್ಲಿ ಸದರಿಯವರಿಗೆ ಮತ್ತು ಇವರಿಗೆ ಸಹಕರಿಸಿದವರಿಗೆ ಸೇರಿ ಗರಿಷ್ಟ ರೂ. 12000/– ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

13. ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರ ಪಡೆಯುವವರ ವಿವರಗಳೇನು.

ಅನ್ವಯಿಸುವುದಿಲ್ಲ.

14. ಅದರ ಬಳಿಕ ಲಭ್ಯವಿರುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳೇನು.

ಅನ್ವಯಿಸುವುದಿಲ್ಲ.

15. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳೇನು.

ಅನ್ವಯಿಸುವುದಿಲ್ಲ.

16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಪದನಾಮಗಳು ಮತ್ತು ಇತರ ವಿವರಗಳು.

ಕ್ರ. ಸಂ.	ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ಪದನಾಮ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ಪದನಾಮ	ಮೇಲ್ಮನವಿ ಪ್ರಾಧಿಕಾರಿ
	ಶ್ರೀ.ಡಿ.ಎಸ್.ಚವ್ಹಾಣ ಅಬಕಾರಿ ನಿರೀಕ್ಷಕರು ಬ.ಬಾಗೇವಾಡಿ ವಲಯ	ಶ್ರೀ.ಜಿ.ಎಸ್.ಪಾಟೀಲ ಅಬಕಾರಿ ಉಪ ನಿರೀಕ್ಷಕರು ಬಸವನ ಬಾಗೇವಾಡಿ ವಲಯ	ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ವಿಜಾಪೂರ

17. ನಿಯಮಿಸಬಹುದಾದಂತ ಇತರೆ ಮಾಹಿತಿಯನ್ನು ಪ್ರಕಟಿಸತಕ್ಕದ್ದು, ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಸ್ಕರಿಸತಕ್ಕದ್ದು.

ಇತರೆ ಮಾಹಿತಿಗಳು ಇರುವುದಿಲ್ಲ.

ಅಬಕಾರಿ ನಿರೀಕ್ಷಕರು,
ಬಸವನ ಬಾಗೇವಾಡಿ ವಲಯ.

ಪಿ.ಆರ್.571

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಆರ್‌ಡಿ 412 ಎಲ್‌ಜಿಬಿ 2010, ಬೆಂಗಳೂರು, ದಿನಾಂಕ:23.05.2011

ನಮೂನೆ–29

68ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಘೋಷಣೆ–ನಿಯಮ 96

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪ– ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ 18.06.2010ರ ದಿನಾಂಕದ ಎಲ್‌ಎನ್‌ಡಿ/ಸಿಆರ್/82/08–09ರ ಕ್ರಮ ಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಖರಾಬು ಜಮೀನು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲೆಗಳನ್ನು ಮತ್ತು ಬೆಂಗಳೂರು ಜಿಲ್ಲಾಧಿಕಾರಿಗಳ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಬಿ ಖರಾಬು ಜಮೀನಿನ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಜಮೀನು ಇರುವ ಗ್ರಾಮ	ಲಗ್ಗೆರೆ ಗ್ರಾಮ
ತಾಲ್ಲೂಕು	ಬೆಂಗಳೂರು ಉತ್ತರ
ಜಿಲ್ಲೆ	ಬೆಂಗಳೂರು
ಸದರಿ ಭಾಗದ ವರ್ಣನೆ	ಖರಾಬು
ಸರಿ ಸುಮಾರು ವಿಸ್ತೀರ್ಣ	0–06 (ಸ.ನಂ.142)
ಮೇರೆಗಳು	ಪೂರ್ವಕ್ಕೆ: ರಸ್ತೆ ಮತ್ತು ಸ.ನಂ.142ರ ಉಳಿಕೆ ಸ್ವತ್ತು ಪಶ್ಚಿಮಕ್ಕೆ: ರಸ್ತೆ ಮತ್ತು ಸ.ನಂ.142ರ ಉಳಿಕೆ ಸ್ವತ್ತು ಉತ್ತರಕ್ಕೆ: ರಸ್ತೆ ಮತ್ತು ಎಂ.ಇ.ಸಿ. ಬಡಾವಣೆ. ದಕ್ಷಿಣಕ್ಕೆ: ರಸ್ತೆ ಮತ್ತು ಸ.ನಂ.142ರ ಉಳಿಕೆ ಸ್ವತ್ತು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್. ಕೃಷ್ಣಪ್ಪ
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ.ಮಂ–2)

ಪಿ.ಆರ್.554

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರ ನ್ಯಾಯಾಲಯ

ಪ್ರಕಟಣೆ

ಸಂಖ್ಯೆ: ಎ2/ಜಿಯುಡಿ/ಎಫ್.ಓ.ಸಿ–9/08–09 ದಿನಾಂಕ:28.03.2011, 1963ನೇ ಕರ್ನಾಟಕ ಅರಣ್ಯ ಅಧಿನಿಯಮ 71(ಬಿ) ಅನ್ವಯ ನೋಟೀಸ್.

ವಿಷಯ: ವಲಯ ಅರಣ್ಯಾಧಿಕಾರಿ, ಕನಕಪುರರವರು ಎಫ್.ಓ.ಸಿ. ಸಂಖ್ಯೆ:9/08–09ರಲ್ಲಿ ಅಮಾನತ್ತುಪಡಿಸಲಾದ ಕರಾಚ ಮರದ ತುಂಡು ಹಾಗೂ ವಾಹನ ಸಂಖ್ಯೆ: ಕೆಎ–25–5669 ಅನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

ಉಲ್ಲೇಖ: 1) ವಲಯ ಅರಣ್ಯಾಧಿಕಾರಿ, ಚನ್ನಪಟ್ಟಣ ವಲಯ ಇವರ ವರದಿ ದಿನಾಂಕ:14.08.2002.

2) ಪ್ರಾದೇಶಿಕ ಸಾರಿಗೆ ಧಾರವಾಡರವರ ಪತ್ರ ದಿನಾಂಕ:28.10.2008.

3) ಈ ಕಛೇರಿಯ ನೋಟೀಸ್ ದಿನಾಂಕ:31.10.2008.

ವಲಯ ಅರಣ್ಯಾಧಿಕಾರಿ, ಕನಕಪುರ ಇವರು ದಿನಾಂಕ:26.08.2008ರಂದು ಯಾವುದೇ ಪರವಾನಗಿ ಇಲ್ಲದೇ ಕರಾಚ ಮರ ಸಾಗಿಸುತ್ತಿದ್ದ ವಾಹನ ಸಂಖ್ಯೆ: ಕೆಎ-25-5669 ನ್ನು ದಸ್ತಗಿರಿ ಮಾಡಿ ಅರಣ್ಯ ಅಪರಾಧ ಸಂಖ್ಯೆ:9/2008-09ನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ವಲಯ ಅರಣ್ಯಾಧಿಕಾರಿ, ಕನಕಪುರರವರು ದಿನಾಂಕ:20.09.2008ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರರವರಿಗೆ ಸಲ್ಲಿಸಿರುತ್ತಾರೆ.

ವಲಯ ಅರಣ್ಯಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ವಾಹನ ಸಂಖ್ಯೆ: ಕೆಎ-25-5669ರಲ್ಲಿ ಪರವಾನಗಿ ಇಲ್ಲದೇ ಕರಾಚ ಮರಗಳನ್ನು ಸಾಗಿಸುತ್ತಿರುವುದು ದೃಢಪಟ್ಟಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಮೇರೆಗೆ ಪ್ರಕರಣವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗರವರು ಪ್ರಾರಂಭಿಸಿ ದಿನಾಂಕ:03.10.2008 ರಂದು ಸಾರಿಗೆ ಪ್ರಾದೇಶಿಕ ಅಧಿಕಾರಿ, ಧಾರವಾಡ ಜಿಲ್ಲೆರವರಿಗೆ ಪತ್ರ ಬರೆದು ಮೇಲ್ಕಂಡ ವಾಹನ ಸಂಖ್ಯೆಯ ಮಾಲೀಕತ್ವದ ಬಗ್ಗೆ ಬಿ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನ್ನು ಕಳುಹಿಸಲು ಕೋರಲಾಗಿತ್ತು. ಪ್ರಾದೇಶಿಕ ಸಾರಿಗೆ ಅಧಿಕಾರಿ, ಧಾರವಾಡರವರು ಕಳುಹಿಸಿದ ವಿವರಗಳನ್ನು ಪರಿಶೀಲಿಸಲಾಗಿ ವಾಹನವು ಹನುಮರೆಡ್ಡಿ ಮೊರಬ ಬಿನ್ ವೆಂಕಟರೆಡ್ಡಿ ರೇಣುಕಾ ಮಿಲ್ಕ್ ಡೈರಿ, ಆನಂದ ಜ್ಯೋತಿ ಬಿಲ್ಡಿಂಗ್, ಹಳೇ ಹುಬ್ಬಳ್ಳಿ ಇವರ ಹೆಸರಿನಲ್ಲಿರುತ್ತದೆ. ಈ ವಿಳಾಸಕ್ಕೆ ದಿನಾಂಕ:07.05.2009, 03.06.2009, 01.08.2009, 09.09.2009, 11.01.2010, 25.09.2010ರಲ್ಲಿ ನೋಟೀಸ್ ಜಾರಿ ಮಾಡಿ ನಿಮ್ಮ ಹೆಸರಿನಲ್ಲಿರುವ ಮೇಲ್ಕಂಡ ವಾಹನವು ಅರಣ್ಯ ಅಪರಾಧದಲ್ಲಿ ತೊಡಗಿದ್ದ ಕಾರಣ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ)ರ ಮೇರೆಗೆ ಮಾಲೀಕರಿಗೆ ಅನೇಕ ನೋಟೀಸ್ ಜಾರಿ ಮಾಡಿ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿತ್ತು. ಆದರೆ ವಾಹನ ಮಾಲೀಕರಿಗೆ ಕಳುಹಿಸಲಾದ ಎಲ್ಲಾ ನೋಟೀಸ್‌ಗಳು ಸದರಿ ವಿಳಾಸದಲ್ಲಿ No such person ಎಂಬ ಅಂಚೆ ಷರಾದೊಂದಿಗೆ ಹಿಂದಿರುಗಿ ಬಂದಿರುತ್ತದೆ.

ಆದ್ದರಿಂದ ವಾಹನದ ಮಾಲೀಕತ್ವ ಹೊಂದಿದ್ದಲ್ಲಿ ಅಂತಹವರು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಸಮ್ಮುಖದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 90 ದಿವಸಗಳೊಳಗೆ ವಾಹನದ ಮಾಲೀಕತ್ವದ ದಾಖಲೆಗಳನ್ನು ಹಾಜರುಪಡಿಸಿ ವಾಹನದ ಮಾಲೀಕತ್ವವನ್ನು ಸಾಭೀತು ಪಡಿಸಬಹುದು. ಒಂದು ವೇಳೆ ಈ ನಿಗದಿತ ಅವಧಿಯಲ್ಲಿ ವಾಹನದ ಮಾಲೀಕತ್ವದ ಬಗ್ಗೆ ಯಾವುದೇ ಅಹವಾಲುಗಳು ಸಲ್ಲಿಕೆಯಾಗದಿದ್ದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಮೇರೆಗೆ ಪ್ರಕರಣದ ವಿಚಾರಣೆಯನ್ನು ನಡೆಸಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸಲಾಗುವುದು.

ವಿ. ಗೀತಾಂಜಲಿ

ಪಿ.ಆರ್.346

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ, ಬಾಗಲಕೋಟೆ

ಅಧಿಸೂಚನೆ

ಸಂಖ್ಯೆ: ಇ2:630: ಪ್ರಾಶಾಶಿ:ಅಗೈರ:29:09-10/761, ದಿನಾಂಕ:23.05.2011

ವಿಷಯ: ಶಾಲಾ ಕೆಲಸಕ್ಕೆ ದೀರ್ಘಾವಧಿಯಿಂದ ಅನಧಿಕೃತ ಗೈರು ಉಳಿದ ಶ್ರೀ ಆರ್.ಎನ್.ಧಡೇಕರ, ಸಶಿ.ಸ.ಕಿ.ಪ್ರಾ.ಶಾಲೆ ಪರಪ್ಪನವರ ತೋಟ ಮದರಖಂಡಿ, ತಾ: ಜಮಖಂಡಿ, ಇವರ ಮೇಲೆ ಶಿಸ್ತು ಕ್ರಮ ಜರುಗಿಸುವ ಕುರಿತು.

ಉಲ್ಲೇಖ: 1) ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಮಖಂಡಿ ಇವರ ವರದಿ ದಿನಾಂಕ:06.04.2011.

2) ದಿನಾಂಕ:05.05.2011ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾದ ನೋಟೀಸು.

3) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ:18:ಸೇಇವಿ:2001 ಬೆಂಗಳೂರು ದಿನಾಂಕ:14.09.2001.

ಪ್ರಸ್ತಾವನೆ:

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಮಖಂಡಿ ಇವರು ತಮ್ಮ ವಲಯದಲ್ಲಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪರಪ್ಪನವರ ತೋಟ ಮದರಖಂಡಿ, ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಆರ್.ಎನ್. ಧಡೇಕರ, ಸಹ-ಶಿಕ್ಷಕರು, ಇವರು ದಿನಾಂಕ:27.01.2011 ರಿಂದ ಶಾಲಾ ಕೆಲಸಕ್ಕೆ ಅನಧಿಕೃತ ಗೈರು ಉಳಿದಿದ್ದು ಇವರಿಗೆ ಸೇವೆಗೆ ಹಾಜರಾಗುವಂತೆ ಸೂಚಿಸಿ ಸೂಚನಾ ಪತ್ರ ಕಳುಹಿಸಿದರೂ ಸೇವೆಗೆ ಹಾಜರಾಗಿಲ್ಲ. ಇವರ ಅನಧಿಕೃತ ಗೈರು-ಹಾಜರಾತಿಯಿಂದ ವಿದ್ಯಾರ್ಥಿಗಳ ಪಾಠ ಬೋಧನೆಗೆ ತೊಂದರೆಯಾಗಿರುವುದಾಗಿ ಉಲ್ಲೇಖ 01 ರಡಿ ಈ ಕಛೇರಿಗೆ ವರದಿ ಸ್ವೀಕೃತವಾಗಿರುತ್ತದೆ. ಸದರಿ ಶಿಕ್ಷಕರ ಮಾಹಿತಿಗೆ ಉಲ್ಲೇಖ 2ರಡಿ ದಿನಾಂಕ:05.05.2011ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮೂಲಕ ತಿಳುವಳಿಕೆ ನೀಡಲಾಗಿದ್ದರೂ ಈವರೆಗೂ ಸದರಿ ಶಿಕ್ಷಕರು ಸೇವೆಗೆ ಹಾಜರಾಗುವ ಬಗ್ಗೆ ಪ್ರತಿಕ್ರಿಯಿಸಿರುವುದಿಲ್ಲ. ಇದರಿಂದ ಇವರಿಗೆ ಸೇವೆಯಲ್ಲಿ ಮುಂದುವರೆಯುವ ಇಚ್ಛೆ ಇಲ್ಲವೆಂಬುದಾಗಿ ಪರಿಗಣಿಸಿ ಹಾಗೂ ಇವರ ಗೈರು ಹಾಜರಾತಿಯಿಂದ ವಿದ್ಯಾರ್ಥಿಗಳ ಪಾಠ ಬೋಧನೆಗೆ ತೊಂದರೆಯಾಗಿರುವುದನ್ನು ಗಮನಿಸಿ ಸದರಿ ಶಿಕ್ಷಕರ ಮೇಲೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿಷದೀಕರಿಸಿದಂತೆ ಶಾಲಾ ಕೆಲಸಕ್ಕೆ ದೀರ್ಘಾವಧಿಯಿಂದ ಅನಧಿಕೃತ ಗೈರು ಉಳಿದು ವಿದ್ಯಾರ್ಥಿಗಳ ಪಾಠ ಬೋಧನೆಗೆ ತೊಂದರೆ ಮಾಡಿದ ಶ್ರೀ ಆರ್.ಎನ್. ಧಡೇಕರ, ಸಹ-ಶಿಕ್ಷಕರು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪರಪ್ಪನವರ ತೋಟ ಮದರಖಂಡಿ, ತಾ:ಜಮಖಂಡಿ, ಇವರ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ, 1957)ರ ನಿಯಮಗಳ ನಿಯಮ 9(2) ಸಿ ದಲ್ಲಿಯ ಅಧಿಕಾರ ಚಲಾಯಿಸಿ ಉಲ್ಲೇಖ 03ರ ಸರ್ಕಾರದ ಅಧಿಸೂಚನೆ ಮತ್ತು ಕ.ನಾ.ಸೇ. ನಿಯಮಾವಳಿಗಳ ನಿಯಮ 108 ರನ್ವಯ ಕೂಡಲೇ ಜಾರಿಗೆ ಬರುವಂತೆ ಸದರಿ ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಮಖಂಡಿ ಇವರು ಸದರಿ ಆದೇಶದ ವಿವರವನ್ನು ಸಂಬಂಧಿಸಿದ ಶಿಕ್ಷಕರ ಸೇವಾಪುಸ್ತಕದಲ್ಲಿ ತಪ್ಪದೇ ನಮೂದಿಸಿ ಮುಂದಿನ ಅವಶ್ಯಕ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಉಪನಿರ್ದೇಶಕರು (ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ.

ಪಿ.ಆರ್.572

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

ಕಾರ್ಮಿಕ ಆಯುಕ್ತರವರ ಕಛೇರಿ, ಕರ್ನಾಟಕ, "ಕಾರ್ಮಿಕ ಭವನ", ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

ಅಧಿಸೂಚನೆ

ಸಂ. ಜಿಜಡ್‌ಟಿ/ಸಿಆರ್-204/10-11, ದಿನಾಂಕ:10-05-11

ವಿಷಯ: ದಿನಾಂಕ 01-01-11 ರಲ್ಲಿದ್ದಂತೆ ಕಾರ್ಮಿಕ ಅಧಿಕಾರಿಗಳ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ ಬಗ್ಗೆ.

ಉಲ್ಲೇಖ: 1. ದಿನಾಂಕ 08-05-09ರ ಸರ್ಕಾರದ ಅಧಿಸೂಚನೆ ಸಂಖ್ಯೆ ಕಾಇ 72 ಎಲ್‌ಇಟಿ 2008.

2. ದಿನಾಂಕ 09-03-11ರ ಸರ್ಕಾರದ ಪತ್ರ ಸಂಖ್ಯೆ ಕಾಇ 62 ಎಲ್‌ಇಟಿ 2011.

3. ದಿನಾಂಕ 11-02-10ರ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 46 ಎಸ್‌ಡಿಎ 2008:

4. ದಿನಾಂಕ 18-08-06ರ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 14 ಎಸ್‌ಎಸ್‌ಆರ್ 2006.

1. ಉಲ್ಲೇಖಿತ(1)ರ ಸರ್ಕಾರದ ಅಧಿಸೂಚನೆಯ ಮೂಲಕ, ದಿನಾಂಕ:01-01-08ರಲ್ಲಿದ್ದಂತೆ ಕಾರ್ಮಿಕ ಅಧಿಕಾರಿಗಳ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು ಹಾಗೂ ಸದರಿ ಅಂತಿಮ ಪಟ್ಟಿಯಲ್ಲಿ ಕ್ರಮ ಸಂಖ್ಯೆ 118ರವರೆಗಿನ ಕಾರ್ಮಿಕ ಅಧಿಕಾರಿಗಳ ಜೇಷ್ಠತೆಯನ್ನು ಅಂತಿಮಗೊಳಿಸಲಾಗಿತ್ತು.

2. ಉಲ್ಲೇಖಿತ (2)ರ ಸರ್ಕಾರದ ಪತ್ರದಲ್ಲಿ – ಉಲ್ಲೇಖಿತ (3)ರ ಅಧಿಸೂಚನೆಯ ಮೂಲಕ, ಗುಂಪು-'ಬಿ' ವೃಂದಕ್ಕೆ, ಇಲಾಖಾ ಮುಖ್ಯಸ್ಥರೇ ನೇಮಕಾತಿ ಪ್ರಾಧಿಕಾರ ಆಗಿರುವುದರಿಂದ ಹಾಗೂ ಉಲ್ಲೇಖಿತ (4)ರ ಅಧಿಸೂಚನೆಯಲ್ಲಿ ನೇಮಕಾತಿ ಪ್ರಾಧಿಕಾರವೇ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲು ಅರ್ಹರಿರುತ್ತಾರೆ ಎಂದು ತಿಳಿಸಿರುವುದರಿಂದ, ಕಾರ್ಮಿಕ ಆಯುಕ್ತರ ಹಂತದಲ್ಲಿ ಕಾರ್ಮಿಕ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿತ್ತು.

3. ಆದ್ದರಿಂದ, ದಿನಾಂಕ 01-01-11ರಲ್ಲಿದ್ದಂತೆ, ಕಾರ್ಮಿಕ ಅಧಿಕಾರಿಗಳ ವೃಂದದ ನೇರ ನೇಮಕಾತಿ ಮತ್ತು ಮುಂಬಡ್ತಿ ಹಂಚಿಕೆಯ ಕೋಷ್ಟಕ (ಅನುಬಂಧ-1) ಮತ್ತು ತಾತ್ಕಾಲಿಕ ಜೇಷ್ಠತಾ ಪಟ್ಟಿ (ಅನುಬಂಧ-2)ಯನ್ನು, 1957ರ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಾವಳಿಯ ನಿಯಮ 10ರ ಅನುಸಾರ, ಸಂಬಂಧಿಸಿದ ಅಧಿಕಾರಿಗಳ ಮಾಹಿತಿಗಾಗಿ, ಈ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ (118)ರವರೆಗಿನ ಅಧಿಕಾರಿಗಳ ಜೇಷ್ಠತೆಯನ್ನು ಉಲ್ಲೇಖಿತ (1)ರ ಅಧಿಸೂಚನೆಯ ಮೂಲಕ ಅಂತಿಮಗೊಳಿಸಲಾಗಿದೆ.

4. ಸದರಿ ಪಟ್ಟಿಯಲ್ಲಿರುವ ಸೇವಾ ವಿವರಗಳ (ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜೇಷ್ಠತೆ, ಇತ್ಯಾದಿ) ಬಗ್ಗೆ, ಕ್ರಮ ಸಂಖ್ಯೆ 118ರ ನಂತರದ (119ರಿಂದ) ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳು, ಏನಾದರು ಆಕ್ಷೇಪಣೆಗಳನ್ನು ಸಲ್ಲಿಸುವುದಿದ್ದಲ್ಲಿ, ಈ ಕರಡು ಅಧಿಸೂಚನೆಯು ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳೊಳಗಾಗಿ ಲಿಖಿತ ಮೂಲಕ, ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಇವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಅನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

5. ಹೀಗೆ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿದ ತರುವಾಯ ಕಾರ್ಮಿಕ ಅಧಿಕಾರಿಗಳ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು, ನಿಯಮಾನುಸಾರ, ಪ್ರಕಟಿಸಲಾಗುವುದು.

ಕಾರ್ಮಿಕ ಆಯುಕ್ತರು

ಅನುಬಂಧ-1

ಅಧಿಸೂಚನೆ ಸಂಖ್ಯೆ ಜಿಜಡ್‌ಟಿ/ಸಿಆರ್-204/10-11, ದಿನಾಂಕ 10-05-11

ದಿನಾಂಕ 01-01-11ರಲ್ಲಿದ್ದಂತೆ ಕಾರ್ಮಿಕ ಅಧಿಕಾರಿಗಳ ವೃಂದದ ನೇರ ನೇಮಕಾತಿ ಮತ್ತು ಮುಂಬಡ್ತಿ ಹಂಚಿಕೆಯ ಕೋಷ್ಟಕ

ವೃಂದ ಬಲ: 43

ಬ್ಲಾಕ್	ಬ್ಲಾಕ್ ಅವಧಿ	ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ರಿಕ್ತ ಸ್ಥಾನಗಳು	ನಿಗದಿತ ಅನುಪಾತ		ಹುದ್ದೆಗಳ ಅನ್ವಯ ಅನುಪಾತ		ನೇರ ನೇಮಕಾತಿಯಲ್ಲಿ (ಡಿ ಆರ್) ನೈಜವಾಗಿ ಭರ್ತಿ ಮಾಡಲ್ಪಟ್ಟ ಸ್ಥಾನಗಳು		ಮುಂಬಡ್ತಿ ಮೂಲಕ ಭರ್ತಿ ಮಾಡಲ್ಪಟ್ಟ ಸ್ಥಾನಗಳು			ಜೇಷ್ಠತೆಗೆ ಲೆಕ್ಕಕ್ಕೆ ಬರುವ ಸ್ಥಾನಗಳು		ಷರಾ
			ಮುಂಬಡ್ತಿ	ನೇರ ನೇಮಕಾತಿ	ಮುಂಬಡ್ತಿ	ನೇರ ನೇಮಕಾತಿ	ಭರ್ತಿ	ಮುಂದುವರೆಸಲ್ಪಟ್ಟವು	ಭರ್ತಿ	ಕೊರತೆ	ಅಧಿಕತೆ	ಮುಂಬಡ್ತಿ	ನೇರ ನೇಮಕಾತಿ	
1	2	3	4	5	6	7	8	9	10	11	12	13	14	15
No carry forward vacancies from the previous Block														
VIII	26-11-82 ರಿಂದ 18-07-83	2	50%	50%	1	1	1	–	1	–	–	1	1	
IX	19—07-83 ರಿಂದ 30-07-91	18	50%	50%	9	9	4	–05	9	–	–	4	9	
X	01-08-91 ರಿಂದ 31-03-97	16	50%	50%	8	8	1	–(12)	14	–	+(6)	8	1	
XI	01-04-97 ರಿಂದ 25-01-06	32	50%	50%	16	16	07	–(21)	15	–	+(5)	16	7	
XII	26-01-06 ರಿಂದ 29-04-06	1	50%	50%	1	–	10	–(11)	–	–	+(4)	1	10	
XIII	30-04-06 ರಿಂದ 27-11-06	1	50%	50%	–	1	1	–(11)	–	–	+(4)	–	1	
XIV	28-11-06 ರಿಂದ ಇಲ್ಲಿಯ ತನಕ	10	50%	50%	5	5	–	–(16)	1	–	–	5	–	

ಕಾರ್ಮಿಕ ಆಯುಕ್ತರು

ಅನುಬಂಧ-2

ಅಧಿಸೂಚನೆ ಸಂಖ್ಯೆ ಜಿಜಡ್‌ಟಿ/ಸಿಆರ್-204/10-11, ದಿನಾಂಕ 10-05-11

ದಿನಾಂಕ 01-01-11ರಲ್ಲಿದ್ದಂತೆ ಕಾರ್ಮಿಕ ಅಧಿಕಾರಿ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ವೃಂದ ಬಲ: 43

ಕ್ರಮ ಸಂಖ್ಯೆ	ಹೆಸರು ಶ್ರೀಮತಿ / ಶ್ರೀ	ನೇರ ನೇಮಕಾತಿ / ಮುಂಬಡ್ತಿ	ಮೀಸಲಾತಿ ಪ್ರವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಹುದ್ದೆ ಹೊಂದಿದ ದಿನಾಂಕ	ಜೇಷ್ಠತೆಗೆ ನೇಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8	9
	ಬ್ಲಾಕ್-VIII (26-11-82 ರಿಂದ 18-07-83)							
89.	ಎಸ್ ಅಣ್ಣಾಜಿರಾವ್ ಜಾಧವ್	ಮುಂಬಡ್ತಿ	–	25-05-39	04-05-66	11-12-82	11-12-82	
90.	ಎಸ್.ಎಸ್.ಷರೀಫ್	ನೇ ನೇ	–	08-10-53	18-07-83	18-07-83	18-07-83	
	ಬ್ಲಾಕ್-IX (19-07-83 ರಿಂದ 30-07-91)							
91.	ಆರ್.ಗೋವಿಂದಪ್ಪ	ಮುಂಬಡ್ತಿ	–	04-12-31	06-05-66	21-07-83	21-07-83	
92.	ಜೆ ಎನ್ ಬಿದರಕೆರೆ	ಮುಂಬಡ್ತಿ	–	05-10-35	05-05-66	21-07-83	21-07-83	
93.	ಟಿ ಬಸವರಾಜು	ಮುಂಬಡ್ತಿ	–	22-04-39	29-09-66	21-07-83	21-07-83	
94.	ಎಚ್ ಎಂ ಇನಾಮ್‌ದಾರ್	ಮುಂಬಡ್ತಿ	–	02-03-34	01-04-53	16-12-87	16-12-87	
95.	ಮೊಹಮದ್ ಹನೀಫ್	ಮುಂಬಡ್ತಿ	–	01-01-37	07-05-66	16-12-87	16-12-87	
96.	ಎಸ್ ಬಿ ಸೊಂಡೂರ್	ಮುಂಬಡ್ತಿ	–	24-07-34	01-11-58	16-12-87	16-12-87	
97.	ಎಸ್ ಆರ್ ಭವಾನೆ	ಮುಂಬಡ್ತಿ	–	06-10-36	11-05-66	16-12-87	16-12-87	
98.	ಎಸ್ ಆರ್ ಬೇಟಿಗೇರಿ	ಮುಂಬಡ್ತಿ	–	10-02-38	30-04-66	16-12-87	16-12-87	
99.	ಜೆ ಡಿ ನಾಯಕ್	ಮುಂಬಡ್ತಿ	ಪ.ಜಾ	10-01-34	06-06-61 21-10-67	16-12-87	16-12-87	
100.	ಟಿ ಎಂ ರಂಗಸ್ವಾಮಿ	ನೇ ನೇ	–	–	16-01-91	16-01-91	16-01-91	
101.	ಜಿ ರತ್ನಮಾಲಾ	ನೇ ನೇ	–	26-07-58	16-01-91	16-01-91	16-01-91	

ಕ್ರಮ ಸಂಖ್ಯೆ	ಹೆಸರು ಶ್ರೀಮತಿ / ಶ್ರೀ	ನೇರ ನೇಮಕಾತಿ / ಮುಂಬಡ್ತಿ	ಮೀಸಲಾತಿ ಪ್ರವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಹುದ್ದೆ ಹೊಂದಿದ ದಿನಾಂಕ	ಜೇಷ್ಠತೆಗೆ ನೇಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8	9
102.	ಜಿ ಕಾಳಯ್ಯ	ನೇ ನೇ	ಪ.ಜಾ	04-07-56	30-07-91	30-07-91	30-07-91	
103.	ಇ ಲಕ್ಕಪ್ಪ	ನೇ ನೇ	–	01-02-58	30-07-91	30-07-91	30-07-91	
	ಬ್ಲಾಕ್-X (01-08-91 ರಿಂದ 31-03-97)							
104.	ಎಲ್ ಎಸ್ ಸುಬ್ಬ ಜಯರಾಮ್	ಮುಂಬಡ್ತಿ	–	04-08-33	15-10-58	16-12-87	01-08-91	
105.	ಲಕ್ಷ್ಮಿ ಪತಿ	ಮುಂಬಡ್ತಿ	–	08-11-37	07-03-60	09-05-90	31-10-91	
106.	ಜಿ ವರದರಾವ್	ಮುಂಬಡ್ತಿ	–	21-04-80	17-10-60	09-05-90	09-11-91	
107.	ಎಸ್ ಸಿ ಬಂಗೇರಾ	ಮುಂಬಡ್ತಿ	–	18-01-41	01-03-62	06-11-91	01-12-92	
108.	ದೇವೇಂದ್ರ ಪೂಜಾರಿ	ಮುಂಬಡ್ತಿ	–	01-07-40	07-03-62	06-11-91	31-12-92	
109.	ಡಿ.ಕೆ.ಜೆಟ್ಟಯ್ಯ	ಮುಂಬಡ್ತಿ	–	15-04-41	23-03-67	28-01-92	30-04-93	
110.	ಹೆಚ್ ಎಸ್ ಬಂಕದಮನಿ	ಮುಂಬಡ್ತಿ	ಎಸ್ ಸಿ	01-06-51	04-08-78	26-08-93	30-09-93	
111.	ವೆಂಕಟೇಶಯ್ಯ	ಮುಂಬಡ್ತಿ	ಎಸ್ ಸಿ	12-11-40	12-09-78	26-08-93	31-10-93	
112.	ಅನುರಾಧ ಆರ್	ನೇ ನೇ	–	16-04-65	31-03-97	31-03-97	31-03-97	
	ಬ್ಲಾಕ್-XI (01-04-97 ರಿಂದ 25-01-06)							
113.	ಕೆ.ಜಿ ಗೌಡ	ಮುಂಬಡ್ತಿ	ಎಸ್ ಟಿ	02-10-48	16-07-73	26-08-93	13-10-93	
114.	ಆರ್ ಟಿ ಮೇತ್ರಿ	ಮುಂಬಡ್ತಿ	ಎಸ್ ಸಿ	20-11-45	21-07-73	18-04-94	18-04-94	
115.	ಸಿ. ಟಿ ಶಾಂತರಾಜು	ಮುಂಬಡ್ತಿ	ಎಸ್ ಟಿ	02-02-45	18-04-74	31-12-94	31-12-94	
116.	ವಿನ್ಸೆಂಟ್ ಕನ್ಸೆಸ್ಸೋ	ಮುಂಬಡ್ತಿ	–	10-10-51	16-07-73	31-12-94	31-12-94	
117.	ರಾಘವೇಂದ್ರ ಕಾಡ್ಲೂರ್	ಮುಂಬಡ್ತಿ	–	23-06-50	16-07-73	07-06-95	31-12-94	
118.	[illegible]	ಮುಂಬಡ್ತಿ		04-05-53	10-07-73	30-08-95	30-08-95	

ಕ್ರಮ ಸಂಖ್ಯೆ	ಹೆಸರು ಶ್ರೀಮತಿ / ಶ್ರೀ	ನೇರ ನೇಮಕಾತಿ / ಮುಂಬಡ್ತಿ	ಮೀಸಲಾತಿ ಪ್ರವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಹುದ್ದೆ ಹೊಂದಿದ ದಿನಾಂಕ	ಜೇಷ್ಠತೆಗೆ ನೇಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8	9
119.	ಷಣ್ಮುಗಂ	ಮುಂಬಡ್ತಿ	ಎಸ್ ಸಿ	10-04-41	27-03-62 15-02-67	15-12-95	31-10-97	
120.	ಯು ಚಂದ್ರಾವತಿ	ಮುಂಬಡ್ತಿ	–	08-04-43	30-05-66	15-12-95	29-11-97	
121.	ಎಂ ಎಸ್ ಶಿವಶಂಕರ್	ಮುಂಬಡ್ತಿ	–	15-10-41	04-05-66	15-12-95	29-11-97	
122.	ಜಿ ಎಸ್ ಲಕ್ಷ್ಮಣಮೂರ್ತಿ	ಮುಂಬಡ್ತಿ	–	16-05-40	20-01-61	15-12-95	29-11-97	
123.	ಎನ್ ಸಿ ಗಾರ್ಗಿ	ಮುಂಬಡ್ತಿ	–	25-05-49	04-08-78	15-12-95	29-11-97	
124.	ಕೆ ಪಿ ಮುಸಿಯಪ್ಪ	ಮುಂಬಡ್ತಿ	–	10-01-54	04-08-78	10-12-96	29-11-97	
125.	ಹೆಚ್ ಕೆ ಷಣ್ಮುಖಪ್ಪ	ಮುಂಬಡ್ತಿ	–	07-05-52	04-08-78	10-12-96	29-11-97	
126.	ಜಿ ಆರ್ ಇಂಗಳೆ	ಮುಂಬಡ್ತಿ.	ಎಸ್ ಸಿ	01-06-52	28-09-81	15-12-95	29-11-97	
127.	ಎಂ ಡಿ ಇಂಡಿ	ಮುಂಬಡ್ತಿ	–	07-03-53	04-08-78	10-12-96	29-11-97	
128.	ಬಿ ಗೋವಿಂದಪ್ಪ	ಮುಂಬಡ್ತಿ	–	08-07-51	12-09-78	10-12-96	29-11-97	
129.	ಜಾನ್ಸನ್ ಕೆ ಜಿ	ನೇ ನೇ	–	04-05-68	04-05-06	04-05-06	04-05-06	ಸರ್ಕಾರದ ಆದೇಶದ ಸಂಖ್ಯೆ
130.	ನಾಗೇಶ್ ಡಿ ಜಿ	ನೇ ನೇ	–	29-06-67	09-05-06	09-05-06	09-05-06	ಕಾಇ326 ಎಲ್‌ಇಟಿ 2005(2)
131.	ಗುರುಪ್ರಸಾದ್ ಹೆಚ್ ಎಲ್	ನೇ ನೇ	–	11-04-76	06-05-06	06-05-06	06-05-06	ದಿನಾಂಕ:25-01-06 ರಲ್ಲಿ
132.	ಶೀಲಾ ಎಮ್ (ಸ್ವಯಂ ನಿವೃತ್ತಿ)	ನೇ ನೇ	–	20-05-72	16-05-06	16-05-06	16-05-06	ತಿಳಿಸಿರುವಂತೆ 1998 ರ ಬ್ಯಾಚ್‌ನ
133.	ರೇವಣ್ಣ ಎಸ್	ನೇ ನೇ	ಎಸ್ ಟಿ	01-05-66	03-05-06	03-05-06	03-05-06	ಕಾರ್ಮಿಕ ಅಧಿಕಾರಿಗಳನ್ನು 1999 ರ ಬ್ಯಾಚ್‌ನ ಅಧಿಕಾರಿಗಳಿಗಿಂತ
134.	ಧರಣೇಶ್	ನೇ ನೇ	ಎಸ್ ಸಿ	14-07-73	04-05-06	04-05-06	04-05-06	ಜೇಷ್ಠತೆಯಲ್ಲಿ ಮೊದಲು
135.	ನಾಗರಾಜ್ ಕೆ ಬಿ	ನೇ ನೇ	–	04-10-68	04-05-06	04-05-06	04-05-06	ತೋರಿಸಲಾಗಿದೆ.
	ಬ್ಲಾಕ್-XII (26-01-06 ರಿಂದ 29-04-06)							
136.	ಎನ್ ಧನಶೇಗರನ್	ಮುಂಬಡ್ತಿ	–	09-07-49	25-02-70	10-12-96	29-11-97	

ಕ್ರಮ ಸಂಖ್ಯೆ	ಹೆಸರು ಶ್ರೀಮತಿ / ಶ್ರೀ	ನೇರ ನೇಮಕಾತಿ / ಮುಂಬಡ್ತಿ	ಮೀಸಲಾತಿ ಪ್ರವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಹುದ್ದೆ ಹೊಂದಿದ ದಿನಾಂಕ	ಜೇಷ್ಠತೆಗೆ ನೇಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8	9
137.	ರವಿಕುಮಾರ್ ಕೆ ಎಲ್	ನೇ ನೇ	–	05-07-69	30-01-06	30-01-06	30-01-06	
138.	ತಮ್ಮಣ್ಣ ಎ ಸಿ	ನೇ ನೇ	–	20-07-75	08-02-06	08-02-06	08-02-06	
139.	ಮಹಮದ್ ಜಹೀರ್ ಭಾಷಾ	ನೇ ನೇ	–	14-02-68	08-02-06	08-02-06	08-02-06	
140.	ವಿನುತ ಎಸ್	ನೇ ನೇ	–	23-12-77	30-01-06	30-01-06	30-01-06	
141.	ಸೋಮಣ್ಣ	ನೇ ನೇ	ಎಸ್ ಸಿ	25-06-74	08-02-06	08-02-06	08-02-06	
142.	ಮೀನಾ ಪಾಟೀಲ್	ನೇ ನೇ	–	28-01-67	06-02-06	06-02-06	06-02-06	
143.	ದೇವರಾಜು ಎಮ್ ಎನ್	ನೇ ನೇ	–	20-05-71	30-01-06	30-01-06	30-01-06	
144.	ಮಹಮದ್ ಬಷೀರ್ ಅನ್ಸಾರಿ	ನೇ ನೇ	–	20-07-71	02-02-06	02-02-06	02-02-06	
145.	ಆರತಿ	ನೇ ನೇ	ಎಸ್ ಸಿ	11-01-77	02-02-06	02-02-06	02-02-06	
146.	ವೀಣಾ ಎಸ್ ಆರ್	ನೇ ನೇ	ಎಸ್ ಸಿ	12-02-73	30-01-06	30-01-06	30-01-06	
	ಬ್ಲಾಕ್– XIII (30-04-06 ರಿಂದ 27-11-06)							
147.	ಸಂತೋಷ್ ಹಿಪ್ಪರಗಿ	ನೇ ನೇ	–	20-05-78	27-11-06	27-11-06	27-11-06	
	ಬ್ಲಾಕ್– XIV (28-11-06 ರಿಂದ ಇಲ್ಲಿಯತನಕ)							
148.	ಕೃಷ್ಣಪ್ಪ	ಮುಂಬಡ್ತಿ	ಎಸ್ ಸಿ	08-02-48	28-09-81	10-12-96	29-11-97	
149.	ಬಿ ಎಸ್ ದಳವಾಯಿ	ಮುಂಬಡ್ತಿ	–	22-04-41	23-02-70	10-12-96	29-11-97	
150.	ಚಂದ್ರಕಾಂತ ವಾರದ್	ಮುಂಬಡ್ತಿ	–	05-06-45	06-01-71	10-12-96	29-11-97	
151.	ಎಂ ಪಿ ಲಕ್ಷ್ಮಣ್ ಸ್ವಾಮಿ	ಮುಂಬಡ್ತಿ	ಎಸ್ ಸಿ	01-06-54	28-09-81	29-07-97	01-06-98	
152.	ಪಿ ವಿಜಯದೇವ್ ನಾಯಕ್	ಮುಂಬಡ್ತಿ	ಎಸ್ ಟಿ	08-05-51	28-09-81	29-07-97	11-03-11	

ಪಿ.ಆರ್.569

ಕಾರ್ಮಿಕ ಆಯುಕ್ತರು

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಕಂಇ 253 ಎಸ್‌ಡಿ 2008, ಬೆಂಗಳೂರು, ದಿನಾಂಕ: 31/05/2011

ದಿನಾಂಕ 17.02.2010ರ ಅಧಿಸೂಚನೆ ಸಂಖ್ಯೆ ಕಂಇ253ಎಎಸ್‌ಡಿ2008ರನ್ವಯ ಕಂದಾಯ ಇಲಾಖೆಯ ತಹಶೀಲ್ದಾರ್ ಗ್ರೂಪ್-ಬಿ ವೃಂದದ ಸೇವಾ ಜೇಷ್ಠತೆಯ ತಾತ್ಕಾಲಿಕ ಪಟ್ಟಿಯನ್ನು ದಿನಾಂಕ 25.03.2010ರಂದು ಕರ್ನಾಟಕ ರಾಜ್ಯ ಪತ್ರದ ಪತ್ರಿಕೆಯಲ್ಲಿ ಪ್ರಕಟಿಸಿ ಸಂಬಂಧಿತ ಅಧಿಕಾರಿಗಳಿಂದ ಬಂದಿದ್ದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಹಿಂದೆ ತಹಶೀಲ್ದಾರ್ ಗ್ರೂಪ್-ಬಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 31.12.2001ರವರಗೆ ಇದ್ದಂತೆ ಅಧಿಸೂಚನೆ ಸಂಖ್ಯೆ ಕಂಇ12ಎಎಸ್‌ಜಿ2001 ದಿನಾಂಕ 11.06.2007ರಂದು ಪ್ರಕಟಿಸಲಾಗಿತ್ತು. ಈ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಲ್ಲಿ ಪೋಷಕ ವೃಂದದ (Feeder cadre) ರಾಜ್ಯಮಟ್ಟದ ಅಂತಿಮಗೊಳಿಸಿದ ಶಿರಸ್ತೇದಾರ್ ಜೇಷ್ಠತಾಪಟ್ಟಿಯಲ್ಲಿನ ಸ್ಥಾನಗಳನ್ನು ಆಧರಿಸಲಾಗಿರುತ್ತದೆ. ತಹಶೀಲ್ದಾರ್ ಗ್ರೂಪ್-ಬಿ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಸ್ಥಾನ ಅಥವಾ ಇತರೆ ಅಂಶಗಳಿಂದ ಬಾಧಿತರಾಗುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಗಳನ್ನು ಪೂರಕ ದಾಖಲಾತಿಗಳೊಂದಿಗೆ ಪ್ರಕಟಿಸಿರುವ ದಿನಾಂಕದಿಂದ 30 ದಿನಗಳೊಳಗಾಗಿ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಸಲ್ಲಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಬಾಧಿತ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳಲ್ಲಿ ಅರ್ಹರಿರುವ ಆಕ್ಷೇಪಣೆಗಳನ್ನು ಪರಿಗಣಿಸಿ ಸರಿಪಡಿಸಲಾಗಿದೆ. ಸರಿಪಡಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 31.12.2008ರವರಗೆ ಇದ್ದಂತೆ ಇದರೊಂದಿಗೆ ಲಗತ್ತಿಸಿದಂತೆ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3).

ವಿವರಣಾ ಪಟ್ಟಿ

ಕಂದಾಯ ಇಲಾಖೆಯ ತಹಶೀಲ್ದಾರ್ ಗ್ರೇಡ್-2 ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಅಂಶಗಳನ್ನು ಆಧರಿಸಿ ಪ್ರಕಟಿಸಲಾಗಿದೆ.

1. ಕಂದಾಯ ಇಲಾಖೆಯ ಗ್ರೂಪ್-ಬಿ ತಹಶೀಲ್ದಾರ್ ವೃಂದದ ಸೇವಾ ಜೇಷ್ಠತೆಯ ತಾತ್ಕಾಲಿಕ ಪಟ್ಟಿಯನ್ನು ಅಧಿಸೂಚನೆ ಸಂಖ್ಯೆ ಕಂಇ253ಎಎಸ್‌ಡಿ2008 ದಿನಾಂಕ 17.02.2010ರಂದು ಕರ್ನಾಟಕ ರಾಜ್ಯ ಪತ್ರದ ಪತ್ರಿಕೆಯಲ್ಲಿ ದಿನಾಂಕ 25.03.2010ರಂದು ಪ್ರಕಟಿಸಿ ತಾತ್ಕಾಲಿಕ ಪಟ್ಟಿಯನ್ನು ಕುರಿತಂತೆ ಸಂಬಂಧಿಸಿದ ಅಧಿಕಾರಿಗಳಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ 30 ದಿನಗಳೊಳಗಾಗಿ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರಿಗೆ ಸಲ್ಲಿಸಲು ಸೂಚಿಸಲಾಗಿತ್ತು.
2. ನಿಗಧಿತ ಕಾಲಾವಧಿಯೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳಲ್ಲಿ ಅರ್ಹರಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.
3. ದಿನಾಂಕ 01.11.1956 ರಿಂದ 31.12.2008ರವರಗೆ ಲಭ್ಯವಾಗಿರುವ ವರ್ಗೀಕೃತ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಲಾಗಿದೆ.
4. ದಿನಾಂಕ 01.11.1956 ರಿಂದ 31.12.2008ರವರಗೆ ತಹಶೀಲ್ದಾರ್ ಗುಂಪು-ಬಿ ವೃಂದದಲ್ಲಿ ಅರ್ಹತಾ ದಿನಾಂಕವನ್ನು ಪಡೆದಿರುವ ಅಧಿಕಾರಿಗಳ ಹೆಸರುಗಳನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ.
5. ದಿನಾಂಕ:11-06-2007 ರಂದು ಪ್ರಕಟಿಸಿದ ತಹಶೀಲ್ದಾರರುಗಳ ಅಂತಿಮ ಜೇಷ್ಠತಾ ಪಟ್ಟಿಯ ಅನುಬಂಧ-1 ರಲ್ಲಿ ದಿನಾಂಕ:01-11-1956 ರಿಂದ 31-12-2001 ರವರೆಗೆ ಒಟ್ಟು 35 ಬ್ಲಾಕುಗಳನ್ನು ರಚಿಸಲಾಗಿದೆ. ಈ ಬ್ಲಾಕ್‌ಗಳಲ್ಲಿ ಬ್ಲಾಕ್ ನಂ.1 ರಿಂದ ಬ್ಲಾಕ್ ನಂ.29 ರವರೆಗೆ ಸರ್ಕಾರದ ಮಾರ್ಗಸೂಚಿಗಳನ್ವಯ ತಯಾರಿಸಲಾಗಿದ್ದು, ಬ್ಲಾಕ್ ನಂ.30 ರಿಂದ ಅಂದರೆ ದಿನಾಂಕ:14-09-1993 ರಿಂದ 31-12-2001ರವರೆಗೆ ಪ್ರತಿ ವರ್ಷಕ್ಕೊಂದರಂತೆ ವರ್ಷವಾರು ಬ್ಲಾಕ್ ಗಳಾಗಿ ರಚಿಸಿದ್ದು ಇರುತ್ತದೆ. ದಿನಾಂಕ:14-09-1993 ರಿಂದ 31-12-2001 ರವರೆಗೆ ತಹಶೀಲ್ದಾರ್ ಗ್ರೇಡ್-2 ರ ವೃಂದಕ್ಕೆ ಲೋಕಸೇವಾ ಆಯೋಗದ ಮೂಲಕ ಯಾವುದೇ ತರಹದ ನೇರನೇಮಕಾತಿ ಆಗದೇ ಇರುವುದರಿಂದ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಬ್ಲಾಕ್‌ಗಳನ್ನು ರಚಿಸಿ ರಿಕ್ತ ಸ್ಥಾನಗಳನ್ನು ವಿಂಗಡಿಸಿರುವುದು ಕಂಡುಬರುತ್ತದೆ. ಆದ್ದರಿಂದ ಈ ಹಂತದಲ್ಲಿ ತಹಶೀಲ್ದಾರರ ವೃಂದದ ಜೇಷ್ಠತಾ ಯಾದಿಯನ್ನು ದಿನಾಂಕ:31-12-2008 ರವರೆಗೆ ಇದ್ದಂತೆ ತಯಾರಿಸಲಾಗುತ್ತಿರುವುದರಿಂದ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 48 ಎಸ್‌ಎಸ್‌ಆರ್ 75, ದಿನಾಂಕ:05-07-1976 ರಲ್ಲಿ ಹೇಳಿರುವಂತೆ ಬ್ಲಾಕ್ ಅವಧಿಯನ್ನು ಒಂದು ನೇರನೇಮಕಾತಿ ದಿನಾಂಕದಿಂದ ಇನ್ನೊಂದು ನೇರನೇಮಕಾತಿ ದಿನಾಂಕದವರೆಗೆ ಅಥವಾ ಮಧ್ಯದ ಅವಧಿಯಲ್ಲಿ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿದ್ದಲ್ಲಿ ತಿದ್ದುಪಡಿ ಮಾಡಿದ ದಿನಾಂಕದಿಂದ ಬ್ಲಾಕ್‌ಗಳನ್ನು ರಚಿಸಬೇಕಾಗುತ್ತದೆ.
6. ಆದ್ದರಿಂದ ಪ್ರಸ್ತುತ ತಯಾರಿಸಲಾಗುತ್ತಿರುವ ತಹಶೀಲ್ದಾರ್ ಗ್ರೇಡ್-2 ವೃಂದದ ಜೇಷ್ಠತಾ ಯಾದಿಯನ್ನು 2006, 2008 ರಲ್ಲಿ ಮಾಡಲಾಗಿರುವ ನೇರನೇಮಕಾತಿ ಹಿನ್ನೆಲೆಯಲ್ಲಿ ಬ್ಲಾಕನ್ನು ಪುನ: ಪರಿಷ್ಕರಿಸಬೇಕಾಗಿರುತ್ತದೆ. ಕಾರಣ ಬ್ಲಾಕ್ ನಂ.29ರ ನಂತರ ಅಂದರೆ, ದಿನಾಂಕ: 13-09-1993 ರ ನಂತರ, ದಿನಾಂಕ:14-09-1993 ರಿಂದ 31-12-2008 ರವರೆಗೆ ಈ ಕೆಳಗಿನಂತೆ ರಚಿಸಲಾಗಿದೆ.

ಬ್ಲಾಕ್ ನಂ. 29	ದಿ:01-08-1992 ರಿಂದ 13-09-1993	
ಬ್ಲಾಕ್ ನಂ. 30	ದಿ:14-09-1993 ರಿಂದ 24-01-2006	ದಿ:25-01-2006 ಕ್ಕೆ ನೇರನೇಮಕಾತಿ ಮೂಲಕ 78 ತಹಶೀಲ್ದಾರರನ್ನು ನೇಮಕ ಮಾಡಲಾಗಿದೆ. ಆದ್ದರಿಂದ ಈ ಬ್ಲಾಕನ್ನು ದಿ: 24-01-2006 ಕ್ಕೆ ಮುಕ್ತಾಯಗೊಳಿಸಲಾಗಿದೆ.
ಬ್ಲಾಕ್ ನಂ.31	ದಿ:25-01-2006 ರಿಂದ 14-04-2006	ದಿ:15-04-2006 ಕ್ಕೆ ನೇರನೇಮಕಾತಿ ಮೂಲಕ 50 ತಹಶೀಲ್ದಾರರನ್ನು ನೇಮಕ ಮಾಡಲಾಗಿದೆ. ಆದ್ದರಿಂದ ಈ ಬ್ಲಾಕನ್ನು ದಿ: 14-04-2006 ಕ್ಕೆ ಮುಕ್ತಾಯಗೊಳಿಸಲಾಗಿದೆ.
ಬ್ಲಾಕ್ ನಂ.32	ದಿ:15-04-2006 ರಿಂದ 21-06-2006	ದಿ:22-06-2006 ಕ್ಕೆ ನೇರನೇಮಕಾತಿ ಮೂಲಕ 40 ತಹಶೀಲ್ದಾರರನ್ನು ನೇಮಕ ಮಾಡಲಾಗಿದೆ. ಆದ್ದರಿಂದ ಈ ಬ್ಲಾಕನ್ನು ದಿ: 21-06-2006 ಕ್ಕೆ ಮುಕ್ತಾಯಗೊಳಿಸಲಾಗಿದೆ.
ಬ್ಲಾಕ್ ನಂ.33	ದಿ:22-06-2006 ರಿಂದ 22-05-2008	ದಿ:23-05-2008 ಕ್ಕೆ ನೇರನೇಮಕಾತಿ ಮೂಲಕ 40 ತಹಶೀಲ್ದಾರರನ್ನು ನೇಮಕ ಮಾಡಲಾಗಿದೆ. ಆದ್ದರಿಂದ ಈ ಬ್ಲಾಕನ್ನು ದಿ: 22-05-2008 ಕ್ಕೆ ಮುಕ್ತಾಯಗೊಳಿಸಲಾಗಿದೆ.
ಬ್ಲಾಕ್ ನಂ.34	ದಿ:23-05-2008 ರಿಂದ 31-12-2008	

7. ದಿನಾಂಕ 31.12.2008ರವರಗೆ ಕೋಟಾದಲ್ಲಿ ಅರ್ಹತಾ ದಿನಾಂಕ ಲಭ್ಯವಾಗದೆ ಇರುವ ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮ 32ರಡಿಯಲ್ಲಿ ನೇರ ನೇಮಕಾತಿ ಕೋಟಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಥವಾ ಕೋಟಾ ಮೀರಿ ಮುಂದುವರೆಯುತ್ತಿರುವ ಹೆಚ್ಚುವರಿ ಅಧಿಕಾರಿಗಳ ಹೆಸರುಗಳನ್ನು ಅನುಬಂಧ (3)ರಲ್ಲಿ ತೋರಿಸಲಾಗಿದೆ. ಮುಂಬಡ್ತಿ ಕೋಟಾ ಮೀರಿ ಮುಂದುವರೆಯುತ್ತಿರುವ ಈ ಅಧಿಕಾರಿಗಳ ಸೇವಾವಧಿಯನ್ನು ಜೇಷ್ಠತೆಯ ಉದ್ದೇಶಕ್ಕೆ ಪರಿಗಣಿಸಲಾಗದು. ಆದರೆ ಅವರುಗಳ ಸೇವೆಯನ್ನು ಅವರುಗಳಿಗೆ ಮುಂಬಡ್ತಿ ಕೋಟಾದಲ್ಲಿ ರಿಕ್ತ ಸ್ಥಾನಗಳು ಲಭ್ಯವಾಗುವ ದಿನಾಂಕದಿಂದ ಪರಿಗಣಿಸಲಾಗುವುದು. ಈ ಬಗೆಗಿನ ಉಲ್ಲೇಖ (1996) 11 SCC 361 ರಲ್ಲಿ ವರದಿಯಾದ ಎ.ಎಸ್.ಪಾಟೀಲ್ ವಿರುದ್ಧ ಮಹಾರಾಷ್ಟ್ರ ರಾಜ್ಯ ಸರ್ಕಾರ ಸಂಬಂಧ ಸರ್ವೋಚ್ಚ ನ್ಯಾಯಾಳಯವು ನೀಡಿದ ತೀರ್ಪು.
8. ಅಂತಿಮ ಜೇಷ್ಠತೆ ಪಟ್ಟಿಯನ್ನು ವಿ.ಬಿ.ಬಾದಾಮಿ ವಿರುದ್ಧ ರಾಜ್ಯ ಸರ್ಕಾರ ಮತ್ತು ಗೋನಾಳ್ ಭೀಮಪ್ಪ ವಿರುದ್ಧ ರಾಜ್ಯ ಸರ್ಕಾರ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರವು ಹೊರಡಿಸಿದ ದಿನಾಂಕ 05.07.1976 ಸಂಖ್ಯೆ ಡಿ.ಪಿ.ಎ.ಆರ್. 48 ಎಸ್.ಎಸ್.ಆರ್. 1975 ಮತ್ತು ದಿನಾಂಕ 14.12.1987 ಸಂಖ್ಯೆ ಸಿಆಸುಇ 43ಸೇಸನಿ1987ರ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚಿಗಳನ್ವಯ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿದೆ.
9. ಸಂಬಂಧಿತ ಬ್ಲಾಕ್ ಅವಧಿಯಲ್ಲಿ ಕೋಟಾ ಮೀರಿ ತುಂಬಿದ ಅಧಿಕಾರಿಗಳ ಜೇಷ್ಠತೆಯನ್ನು ತರುವಾಯದ ಬ್ಲಾಕ್‌ನಲ್ಲಿ ಅವರಿಗೆ ಸಂಬಂಧಿಸಿದ ಮುಂಬಡ್ತಿ ರಿಕ್ತ ಸ್ಥಾನಗಳ ಕೋಟಾದಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಲಾರುತ್ತದೆ. (ಅನುಬಂಧ (1) ರಲ್ಲಿ ತೋರಿಸಲಾಗಿದೆ.)
10. ನೇರ ನೇಮಕಾತಿದಾರರು (DR) ತಾನು ನೇಮಕಾತಿ ಹೊಂದಿದ ದಿನಾಂಕಕ್ಕಿಂತ ಮುಂಚಿತವಾಗಿ ಅರ್ಹತಾ ದಿನಾಂಕವನ್ನು ಅಥವಾ ರಿಕ್ತ ಸ್ಥಾನ ಉದ್ಭವಿಸಿದ ದಿನಾಂಕದಿಂದ ಜೇಷ್ಠತೆಯನ್ನು ಪಡೆಯುವಂತಿಲ್ಲ ಈ ಬಗ್ಗೆ (1977) 1 SCC 308 ರಲ್ಲಿ ವರದಿಯಾದ ಎನ್.ಕೆ. ಚವ್ಹಾಣ ವಿರುದ್ಧ ಗುಜರಾತ್ ರಾಜ್ಯ ಸರ್ಕಾರ ಮತ್ತು (1983) 3 SCC 601 ರಲ್ಲಿ ವರದಿಯಾದ ಎ.ಜನಾರ್ಧನ್ ವಿರುದ್ಧ ಭಾರತ ಸರ್ಕಾರ ಮತ್ತು 2007 1 SCC 683 ರಲ್ಲಿ ವರದಿಯಾದ ಉತ್ತರಾಂಚಲ ರಾಜ್ಯ ಸರ್ಕಾರ ಮತ್ತೊಬ್ಬರ ವಿರುದ್ಧ ದಿನೇಶ್ ಕುಮಾರ್ ಶರ್ಮ ಸೂರಜ್ ಪ್ರಕಾಶ್ ಗುಪ್ತ ಮತ್ತಿತರರು ವಿರುದ್ಧ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ (2000) 7 SCC 561 (ಪುಟ 599) ಈ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಆಧಾರವಾಗಿದೆ.
11. ಮುಂಬಡ್ತಿ ಪಡೆದವರಿಗೆ ಅರ್ಹತಾ ದಿನಾಂಕವನ್ನು ರಿಕ್ತ ಸ್ಥಾನ ಉಪಯೋಗಿಸಿದ ಅಥವಾ ಮುಂಬಡ್ತಿ ಕೋಟದಲ್ಲಿ ಲಭ್ಯವಾಗುವ ರಿಕ್ತ ಸ್ಥಾನಕ್ಕೆ ಅನುಗುಣವಾಗಿ ತೋರಿಸಿದೆ ಈ ಬಗೆಗಿನ ಉಲ್ಲೇಖ AIR 1991 SC 284 (ಕೇಶವಚಂದ್ರ ಜೋಷಿ ಮತ್ತಿತರರು ವಿರುದ್ಧ ಭಾರತ ಸರ್ಕಾರ) AIR 1991 SC 1406 (ಎ.ಎನ್.ಸೆಹಗಲ್ ಮತ್ತಿತರರ ವಿರುದ್ಧ ರಾಜಾರಾಂ ಶೆರೋಮ್ ಮತ್ತಿತರರು.) AIR 2000 SC 2386 ಸೂರಜ್ ಪ್ರಕಾಶ್ ಗುಪ್ತ ಮತ್ತಿತರರ ವಿರುದ್ಧ ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ ಮತ್ತಿತರರು.
12. ನೇರ ನೇಮಕಾತಿ ಹೊಂದಿದ ಅಭ್ಯರ್ಥಿಗಳು ನಿಯಮಾನುಸಾರ ಅನುಮತಿಸಿದ ಅವಧಿಯೊಳಗೆ ಕರ್ತವ್ಯಕ್ಕೆ ಹಾಜರಾದಲ್ಲಿ ಅಂತಹವರ ಜೇಷ್ಠತೆಯನ್ನು 1957ರ ಜೇಷ್ಠತಾ ನಿಯಮಗಳ ಪ್ರಕಾರ ಆಯ್ಕೆ ಪಟ್ಟಿಯಂತೆ ನಿಗದಿಗೊಳಿಸಲಾಗಿದೆ. ಒಂದು ವೇಳೆ ನೇರ ನೇಮಕಾತಿ ಪಡೆದ ಅಭ್ಯರ್ಥಿಯು ಅನುಮತಿಸಿದ ಅವಧಿಯನ್ನು ಮೀರಿ ಹೆಚ್ಚಿನ ಕಾಲಾವಕಾಶ ಪಡೆದು ಕರ್ತವ್ಯಕ್ಕೆ ಹಾಜರಾದಲ್ಲಿ ಅಂತಹವರ ಜೇಷ್ಠತೆಯನ್ನು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸಲಾಗುವುದು.
13. ಅಂತಿಮವಾದ ಈ ಜೇಷ್ಠತಾ ಪಟ್ಟಿಯಲ್ಲಿ ನೇರ ನೇಮಕಾತಿ ಪ್ರವರ್ಗದವರ ನೇಮಕಾತಿಯ ಕೋಟವನ್ನು ಮೀರಿಲ್ಲ ಮತ್ತು ಅವರುಗಳನ್ನು ನೇರ ನೇಮಕಾತಿ ಕೋಟಾದಲ್ಲಿ ಹೊಂದಾಣಿಕೆ ಮಾಡಲಾಗಿದೆ. ಉಳಿದಂತೆ ಮುಂಬಡ್ತಿ ಪ್ರವರ್ಗದವರ ವಿಷಯದಲ್ಲಿ ಕೋಟಾವನ್ನು ಮೀರಿದಂತಹವರನ್ನು ಮತ್ತು ಅರ್ಹತಾ ದಿನಾಂಕ ಪಡೆಯದಿರುವವರನ್ನು ಹೆಚ್ಚುವರಿಯಾಗಿ ತೋರಿಸಲಾಗಿದೆ. ಕೋಟಾ ಮೀರಿ ಮುಂ

ಪಡೆದ ವ್ಯಕ್ತಿಯ ಮುಂಬಡ್ತಿಯು ಅಡ್‌ಹಾಕ್ ಬಡ್ತಿಯಾಗಿದ್ದು. ಅಡ್‌ಹಾಕ್ ಬಡ್ತಿ ಆಧಾರದ ಸೇವೆಯನ್ನು ಜೇಷ್ಠತೆಗೆ ಪರಿಗಣಿಸಲಾಗದು. ಈ ಬಗೆಗಿನ ಉಲ್ಲೇಖ , 1992 SUPP (1) SC 272 (ಕೇಶವಚಂದ್ರ ಜೋಷಿ ವಿರುದ್ಧ ಭಾರತ ಸರ್ಕಾರ) ಮತ್ತು (1996) SC 361 (ಎಂ.ಎಸ್.ಪಾಟೀಲ್ ವಿರುದ್ಧ ಮಹಾರಾಷ್ಟ್ರ ಸರ್ಕಾರ).

14. ಪೂರ್ವಾನ್ವಯವಾಗಿ ಬಡ್ತಿಗಳನ್ನು ನೀಡಬೇಕೆನ್ನುವ ಕೆಲವು ಅಧಿಕಾರಿಗಳ / ನಿವೃತ್ತ ಅಧಿಕಾರಿಗಳ ಆಕ್ಷೇಪಣೆಗಳನ್ನು ಪರಿಗಣಿಸಲಾಗಿ, ಅಧಿಸೂಚನೆ ಸಂಖ್ಯೆ: ಅರ್‌ಡಿ 12 ಎಎಸ್‌ಜಿ 2001, ದಿನಾಂಕ: 11-06-2007 ರಂದು ಇದ್ದಂತೆ ಪ್ರಕಟಿಸಿದ ಜೇಷ್ಠತಾ ಪಟ್ಟಿಯ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ಕೇಸುಗಳನ್ನು ದಾಖಲಿಸಿ ತಡೆಯಾಜ್ಞೆ / ನಿರ್ದೇಶನ / ಆದೇಶ ವಗೈರೆ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ:31-12-2008 ರವರೆಗೆ ಇದ್ದಂತೆ ಅಂತಿಮಗೊಳಿಸಿ ಪ್ರಕಟಿಸಿದ ಈ ಜೇಷ್ಠತಾ ಪಟ್ಟಿಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ನಿವೃತ್ತಿ ವೇತನ ನಿಯಂತ್ರಣ) ನಿಯಮ 1978 ರನ್ವಯ ಪೂರ್ವಾನ್ವಯ ಬಡ್ತಿ ನೀಡಲಾಗಲೀ ಅಥವಾ ವೇತನ ಬಾಕಿಯನ್ನು ನೀಡಲಾಗಲೀ ಆಸ್ಪದವಿರುವುದಿಲ್ಲ. ಅದೇ ರೀತಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ನಿವೃತ್ತಿ ವೇತನ ನಿಯಂತ್ರಣ) ಕಾಯ್ದೆ 1973 ರನ್ವಯ ಅರ್ಹತಾ ದಿನಾಂಕಗಳನ್ನು ನೀಡಬಹುದಾಗಿದೆಯೇ ಹೊರತು ಅದೇ ಕಾಯ್ದೆಯ ಸೆಕ್ಷನ್ 4(2) ಪ್ರಕಾರ ಯಾವುದೇ ವೇತನ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ. ಮುಂದುವರೆದು, 2007 AIR SCW 7023 ರಲ್ಲಿ ವರದಿಯಾದ ಭಾರತ ಸರ್ಕಾರ ವಿರುದ್ಧ ಬಿ.ಎಂ.ಜಾ ಮತ್ತು (2009 1 SCC (L&S) 671 ರಲ್ಲಿ ವರದಿಯಾದ ನಿರ್ಮಲಾ ಚಂದ್ರ ಸಿನ್ಹ ವಿರುದ್ಧ ಭಾರತ ಸರ್ಕಾರ ಈ ಪ್ರಕರಣಗಳಲ್ಲಿ ಕ್ರಮವಾಗಿ ಸರ್ವೋಚ್ಚ ನ್ಯಾಯಾಲಯವು ಪೂರ್ವಾನ್ವಯವಾಗಿ ಮುಂಬಡ್ತಿ ಪಡೆದವರು NO WORK NO PAY ಆಧಾರದ ಮೇಲೆ ವೇತನ ಬಾಕಿಗೆ ಅರ್ಹರಿಲ್ಲವೆಂದು ನಿರ್ಣಯಿಸಿದೆ. ಮತ್ತು ಮುಂಬಡ್ತಿಯ ಪರಿಣಾಮಿ ದಿನಾಂಕವನ್ನು (Effective Date) ಮುಂಬಡ್ತಿ ರಿಕ್ತ ಸ್ಥಾನ ಉದ್ಭವಿಸಿದ ಅಥವಾ ಹುದ್ದೆಯನ್ನು ಸೃಜಿಸಿದ ದಿನಾಂಕದಿಂದ ಪರಿಗಣಿಸಲಾಗದು. ಬದಲಿಗೆ ಅದು ನಿಯತವಾಗಿ (Regular) ಮುಂಬಡ್ತಿ ನೀಡಿದ ದಿನಾಂಕದಿಂದ ಪರಿಣಾಮಕ್ಕೆ ಬರುತ್ತದೆ. ಆದುದರಿಂದ ಈ ಹಿನ್ನೆಲೆಯಲ್ಲಿ ಪೂರ್ವಾನ್ವಯವಾಗಿ ಪರಿಭಾವಿತ ಮುಂಬಡ್ತಿಯನ್ನಾಗಲೀ (Deemed Promotion) ಅಥವಾ ಇತರೆ ತತ್ಪರಿಣಾಮವಾದ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ. ಈ ಬಗ್ಗೆ Union of India Vs K.K.Vadera (1989 SUPP(2) SCC 625) State of Uttaranchal Vs Dinesh Kumar Sharma (2007 1 SCC 683), K.V.Subbarao Vs Govt.of A.P. (1988 2 SCC 201) ಮತ್ತು Sanjay K.Sinha-II Vs State of Bihar (2004) 10 SCC 374 ಈ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ಣಯಗಳು ಉಲ್ಲೇಖಾರ್ಹವಾಗಿವೆ.

15. ಮೊದಲಿಗೆ ಕೆಸಿಎಸ್‌ಆರ್ ನಿಯಮ 32 ರ ಪ್ರಕಾರ ಸ್ವತಂತ್ರ ಪ್ರಭಾರದಲ್ಲಿ ಇರಿಸಲ್ಪಟ್ಟು ಮುಂದುವರೆದ ನೇಮಕಾತಿಗಳು ನಿಯತವಾದ (Regular) ಮುಂಬಡ್ತಿಗಳಲ್ಲ. ಹೆಚ್ಚೆಂದರೆ ಅಂತಹ ನೇಮಕಾತಿಗಳು ತಾತ್ಕಾಲಿಕ ನೇಮಕಾತಿಗಳಾಗಿರುತ್ತವೆ. ಈ ಬಗ್ಗೆ 2010 ಕೆಎಸ್‌ಎಲ್‌ಜೆ 1 ರಲ್ಲಿ ವರದಿಯಾದ ರವಿಕಾಂತೇಗೌಡ ಮತ್ತಿತರರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ (ಅರ್ಜಿ ಸಂಖ್ಯೆ: 149/2008 ಮತ್ತು ಇದಕ್ಕೆ ಜೊತೆ ಮಾಡಿದ ಇತರೆ ಪ್ರಕರಣಗಳು) ಪ್ರಕರಣದ ಬಗ್ಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನಿರ್ಣಯಿಸಿದಂತೆ ಕೆಸಿಎಸ್‌ಆರ್ ನ ನಿಯಮ 32 ರಂತೆ ಮಾಡಿದ ನೇಮಕಾತಿಯಲ್ಲಿ ಸಲ್ಲಿಸಿದ ಸೇವೆಯನ್ನು ಜೇಷ್ಠತೆಗೆ ಪರಿಗಣಿಸಲಾಗದು. ಈ ಬಗೆಗಿನ ಉಲ್ಲೇಖ (1996) 11 SCC M.S.Patil Vs State of Maharastra.

16. ಅಂತಿಮವಾಗಿ 1998, 1999 ರ ತಂಡದ ನೇರನೇಮಕಾತಿ ತಹಶೀಲ್ದಾರ್‌ರವರುಗಳ ಪೈಕಿ 1999 ರ ತಂಡದ ತಹಶೀಲ್ದಾರ್‌ರವರುಗಳು ತಹಶೀಲ್ದಾರ್ ಹುದ್ದೆಗೆ ಕಾರ್ಯವರದಿ ಮಾಡಿಕೊಂಡ ದಿನಾಂಕವನ್ನು ಪರಿಗಣಿಸಿ ಅವರುಗಳ ಪರಸ್ಪರ (Inter-Se) ಜೇಷ್ಠತೆಯನ್ನು ನಿಗಧಿಪಡಿಸುವಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆದರೆ ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 10605-10620/2010 ಮತ್ತು ಇದಕ್ಕೆ ಜೊತೆಮಾಡಿದ ರಿಟ್ ಅರ್ಜಿಗಳ ಕುರಿತು ದಿ:08-12-2010 ರಂದು ನೀಡಿದ ತೀರ್ಪಿನಲ್ಲಿ ನಿರ್ಣಯಿಸಿದ ಅಂಶಗಳ ಹಿನ್ನೆಲೆಯಲ್ಲಿ 1998 ರ ನೇರ ನೇಮಕಾತಿ ತಹಶೀಲ್ದಾರ್ ತಂಡವು ಜೇಷ್ಠತೆಯಲ್ಲಿ ವರಿಷ್ಠರೆಂದು ಪರಿಗಣಿಸಿರುವುದರಿಂದ ಅದರಂತೆ 1998ರ ತಹಶೀಲ್ದಾರ್ ತಂಡದ ಜೇಷ್ಠತೆಯನ್ನು ನಿಗದಿಪಡಿಸಲಾಗಿದೆ.

17. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರನ್ನು ಮುಂಬಡ್ತಿಗಾಗಿ ರೋಸ್ಟರ್ ಬಿಂದುಗಳ ಪ್ರಕಾರ ಅವರುಗಳನ್ನು ಮುಂಬಡ್ತಿಗೆ ಪರಿಗಣಿಸಿದ್ದರೂ ಆದರೆ ಜೇಷ್ಠತೆ ಉದ್ದೇಶಕ್ಕಾಗಿ ಸಿಆಸುಇಲಾಖೆ ಹೊರಡಿಸಿದ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ:1-6-78 ರಲ್ಲಿನ ಸೂಚನೆಗಳಂತೆ ಜೇಷ್ಠತೆ ಸ್ಥಾನವನ್ನು ನಿಗದಿಪಡಿಸಿದೆ.

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3).

ಬ್ಲಾಕ್ ನಂ. 30 ರಿಂದ 34 ರವರೆಗೆ ಮುಂಬಡ್ತಿ ವರ್ಗದವರಿಗೆ ಲಭ್ಯವಾದ ರಿಕ್ತ ಸ್ಥಾನಗಳಿಗೆ ಮುಂಬಡ್ತಿ ನೀಡಿದ ವಿವರಗಳು

ಅಂತಿಮಗೊಳಿಸುತ್ತಿರುವ ಜೇಷ್ಠತಾ ಪಟ್ಟಿಯಲ್ಲಿ ಜೇಷ್ಠತೆ ನಿಗದಿಪಡಿಸುವುದನ್ನು ಬ್ಲಾಕ್ 30 ರಿಂದ ಪ್ರಾರಂಭಿಸಿ ಅಂತಿಮವಾಗಿ ಬ್ಲಾಕ್ ನಂ.34 ಕ್ಕೆ ಕೊನೆಗೊಳಿಸಿದೆ. ಬ್ಲಾಕ್ ನಂ. 30 ರಿಂದ 34 ರವರೆಗೆ ಎಲ್ಲಾ ಅವಧಿಗಳಲ್ಲಿ ನೇರ ನೇಮಕಾತಿ ಹುದ್ದೆಗಳು ಯಾವಾಗಲೂ ಸಾಕಷ್ಟು ಲಭ್ಯವಿದ್ದಿದ್ದರಿಂದ ಆಯಾ ಅವಧಿಯಲ್ಲಿ ನೇರ ನೇಮಕಾತಿ ಮೂಲಕ ಬಂದಂತಹ ಅಭ್ಯರ್ಥಿಗಳನ್ನು ಅವರುಗಳ Slot ನಲ್ಲಿ ಸ್ಥಾನ ಕಲ್ಪಿಸಿದೆ. ಆದರೆ ಸಮಸ್ಯೆ ಇರುವುದು

ಮುಂಬಡ್ತಿ ವರ್ಗದವರಿಗೆ ಮಾತ್ರ. ಅದು ಹೇಗೆಂದರೆ ಮುಂಬಡ್ತಿ ವರ್ಗದವರ ಪಾಲಿನ ಬಡ್ತಿ ಹುದ್ದೆಗಳನ್ನು ಲೆಕ್ಕಾಚಾರವಾಗಿ ಕೋಟಾ ಪ್ರಕಾರ ನಿಯತವಾಗಿ ತುಂಬಿರುವುದಿಲ್ಲ. ಒಮ್ಮೊಮ್ಮೆ ಮುಂಬಡ್ತಿ ಹುದ್ದೆಗಳಲ್ಲಿ ಮೊದಲಿಗೆ ನಿಯಮ 32 ರ ಪ್ರಕಾರ ಸ್ವತಂತ್ರ ಪ್ರಭಾರದಲ್ಲಿರಿಸಿ ಆನಂತರ ಅವರುಗಳನ್ನು ಸಾರಾ ಸಗಟಾಗಿ ಸಕ್ರಮಾತಿಗೊಳಿಸಿದ್ದರಿಂದ ಸಕ್ರಮಗೊಂಡ ಅಷ್ಟೂ ಜನರಿಗೆ ಆಯಾ ಬ್ಲಾಕ್‌ನಲ್ಲಿ ಸ್ಥಳಾವಕಾಶ ಕಲ್ಪಿಸಲು ಸಾಧ್ಯವಿರುವುದಿಲ್ಲ. ಹೀಗಾಗಿ ಅಂತಹವರನ್ನು ಮುಂದಿನ ಬ್ಲಾಕಿಗೆ ಕೊಂಡೊಯ್ದು ಅಲ್ಲಿ ಹೊಂದಾಣಿಕೆ ಮಾಡಲಾಗಿದೆ. ಹಾಗೆ ಬ್ಲಾಕ್ ನಂ.30 ರಿಂದ 34 ರವರೆಗೆ ಮುಂಬಡ್ತಿ ವರ್ಗದವರಿಗೆ ಹೊಂದಾಣಿಕೆ ಮಾಡಿರುವ ವಿವರಗಳು ಈ ಕೆಳಗಿನಂತಿದೆ.

ಬ್ಲಾಕ್ ನಂ.30 :

ಈ ಬ್ಲಾಕಿನಲ್ಲಿ 1422 ರಿಂದ 1509 ರವರೆಗಿನ ಮುಂಬಡ್ತಿ ವರ್ಗದವರಿಗೆ ಸರ್ಕಾರಿ ಆದೇಶ ದಿನಾಂಕ: 27-01-2001 ರನ್ವಯ ಸಕ್ರಮಗೊಳಿಸಿದ್ದರಿಂದ ಅವರುಗಳಿಗೆ ಆ ದಿನಾಂಕದಿಂದ ಅನ್ವಯಿಸುವಂತೆ ಅರ್ಹತಾ ದಿನಾಂಕವನ್ನು ಕೊಡಲಾಗಿದೆ / ನಿಗದಿಪಡಿಸಿದೆ – **ಒಟ್ಟಾರೆ ಸಂಖ್ಯೆ 86 ಮಂದಿ.**

ಕ್ರಸಂ.1510 ರಿಂದ 1514 – ಇಲ್ಲಿ ಬರುವ 5 ಮಂದಿ ಎಸ್‌ಸಿ/ಎಸ್‌ಟಿ ವರ್ಗದ ವಿಶೇಷ ನೇರ ನೇಮಕಾತಿ ಮೂಲಕ ಬಂದಂತಹವರಾಗಿರುವುದರಿಂದ ಅವರುಗಳ ನೇಮಕಾತಿ ದಿನಾಂಕ:08-07-2002 ನ್ನು ಆಧರಿಸಿ ನೇರ ನೇಮಕಾತಿ ಕೋಟಾದಲ್ಲಿ ಸ್ಥಳಾವಕಾಶ / ಸ್ಥಾನ ನಿಗದಿಪಡಿಸಿದೆ.

ಕ್ರಸಂ. 1515 ರಿಂದ 1577– ಇದರಲ್ಲಿ ಬರುವ ಮುಂಬಡ್ತಿದಾರರಿಗೆ ತಹಶೀಲ್ದಾರ್ ಗ್ರೇಡ್-2 ಹುದ್ದೆಯಲ್ಲಿ ದಿನಾಂಕ:19-08-2002 ರಿಂದ ಜಾರಿಗೆ ಬರುವಂತೆ ಬಡ್ತಿ ಹುದ್ದೆಯಲ್ಲಿ ಸಕ್ರಮಗೊಳಿಸಿದ್ದರಿಂದ ಅದನ್ನು ಆಧರಿಸಿ ಅವರುಗಳಿಗೆ ದಿನಾಂಕ; 19-08-2002 ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ.

ಬ್ಲಾಕ್ ನಂ.31 :

ಕ್ರಸಂ. 1578 ರಿಂದ 1584 – ಇಲ್ಲಿ ಬರುವ 7 ಮಂದಿ ಮುಂಬಡ್ತಿದಾರರನ್ನು ತಹಶೀಲ್ದಾರ್ ಗ್ರೇಡ್-2 ಹುದ್ದೆಯಲ್ಲಿ ದಿನಾಂಕ:19-08-2002 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿದ್ದರೂ ಮುಂಬಡ್ತಿ ಕೋಟಾದಲ್ಲಿ ಅವರಿಗೆ ಸ್ಥಳಾವಕಾಶ ಕಲ್ಪಿಸಲು / ಜೇಷ್ಠತೆ ಸ್ಥಾನ ನಿಗದಿಪಡಿಸಲು ಹುದ್ದೆಗಳು ಲಭ್ಯವಿಲ್ಲದಿದ್ದರಿಂದ ಇವರುಗಳನ್ನು ಬ್ಲಾಕ್ ನಂ.31 ಕ್ಕೆ ಕೊಂಡೊಯ್ದು ನೇರ ನೇಮಕಾತಿ ವರ್ಗದವರ ಮೇಲೆ ಜೇಷ್ಠತೆ ನಿಗದಿಪಡಿಸಿದೆ.

ಬ್ಲಾಕ್ ನಂ.32 :

ಕ್ರಸಂ.1712 ರಿಂದ 1718 – ಇಲ್ಲಿ ಬರುವ 7 ಮಂದಿ ಮುಂಬಡ್ತಿದಾರರನ್ನು ತಹಶೀಲ್ದಾರ್ ಗ್ರೇಡ್-2 ಹುದ್ದೆಯಲ್ಲಿ ದಿನಾಂಕ:19-08-2002 ರ ಸರ್ಕಾರಿ ಆದೇಶದ ಪ್ರಕಾರ ಸಕ್ರಮಗೊಳಿಸಿದ್ದರೂ ಅವರುಗಳನ್ನು ಮುಂಬಡ್ತಿ ಪಾಲಿನ ಕೋಟಾದಲ್ಲಿ ಸ್ಥಾನ ನೀಡಲಾಗಿದೆ. ಹೀಗಿದ್ದಾಗ್ಯೂ ಅವರುಗಳಿಗೆ ದಿನಾಂಕ:01-05-2006ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ. ಇದಕ್ಕೆ ಕಾರಣ ದಿನಾಂಕ:15-04-2006 ರಂದು ಯಾವುದೇ ಮುಂಬಡ್ತಿ ಹುದ್ದೆಗಳು ಇರಲಿಲ್ಲ.

ಬ್ಲಾಕ್ ನಂ.33 :

ಈ ಬ್ಲಾಕಿನಲ್ಲಿ ಒಟ್ಟಾರೆ ಬರುವ 94 ಮುಂಬಡ್ತಿದಾರರಲ್ಲಿ ಕ್ರಸಂ.1757 ರಿಂದ 1765 ರವರೆಗೆ ಬರುವ ಅಧಿಕಾರಿಗಳನ್ನು ದಿನಾಂಕ:19-08-2002 ರಿಂದ ಜಾರಿಗೆ ಬರುವಂತೆ ಸಕ್ರಮಗೊಳಿಸಿದ್ದಾಗ್ಯೂ ಮುಂಬಡ್ತಿ ಪಾಲಿನ ಕೋಟಾದಲ್ಲಿ ಹುದ್ದೆಗಳು ಲಭ್ಯವಾಗದಿದ್ದರಿಂದ ಅವರುಗಳನ್ನು ಬ್ಲಾಕ್ ನಂ.33 ಕ್ಕೆ ಕೊಂಡೊಯ್ದು ಅವರುಗಳಿಗೆ 24-12-2007ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ. ಏಕೆಂದರೆ ಸದರಿ ದಿನಾಂಕದಂದು ಮುಂಬಡ್ತಿ ಪಾಲಿನ ಹುದ್ದೆಗಳು ಕ್ರೋಢೀಕೃತಗೊಂಡಿದ್ದವು / ಒಗ್ಗೂಡಿದ್ದವು (Accumulated Vacancies). ಅದೇ ರೀತಿ ಕ್ರಸಂ. 1766 ರಿಂದ 1786 ರವರೆಗೆ ಬರುವ ಮುಂಬಡ್ತಿದಾರರನ್ನು ದಿನಾಂಕ: 31-12-2002 ರಿಂದ ಸಕ್ರಮಗೊಳಿಸಿದ್ದರೂ ಮುಂಬಡ್ತಿ ಕೋಟಾದಲ್ಲಿ ಹುದ್ದೆಗಳು ಲಭ್ಯವಾಗದಿದ್ದರಿಂದ ಅವರುಗಳನ್ನು ಕೆಳಗಿನ ಸ್ಥಾನಗಳಿಗೆ ದೂಕಲಾಗಿದೆ (Pushed down).

ಕ್ರಸಂ.1787ರ ನಂತರ ಬರುವವರು ದಿನಾಂಕ;28-01-2008 ರಂದು ಮುಂಬಡ್ತಿ ಕೋಟಾದಲ್ಲಿ ಬಡ್ತಿ ಹೊಂದಿದ್ದರೂ ಇವರುಗಳಿಗೆ ದಿನಾಂಕ:24-12-2007 ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ. ಇದಕ್ಕೆ ಕಾರಣ ಸದರಿ ದಿನಾಂಕದಂದು ಹುದ್ದೆಗಳು ಒಗ್ಗೂಡಿ ಬಂದಿದ್ದವು (Accumulated). ಆದ್ದರಿಂದ ಅವರುಗಳಿಗೆ ದಿನಾಂಕ;24-12-2007 ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ.

ಬ್ಲಾಕ್ ನಂ.34 :

ಈ ಬ್ಲಾಕ್‌ನಲ್ಲಿ ಕ್ರಸಂ.1850 ರಿಂದ 1857 ರವರೆಗೆ ಬರುವ ಮುಂಬಡ್ತಿದಾರರಿಗೆ ಉದ್ಭವಿಸಿದ ಬಡ್ತಿ ರಿಕ್ತ ಸ್ಥಾನಗಳಿಗೆ ಅನುಗುಣವಾಗಿ ದಿನಾಂಕ:28-01-2008 ರ ಅರ್ಹತಾ ದಿನಾಂಕವನ್ನು ನೀಡಲಾಗಿದೆ.

ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3).

ANNEXURE - I

Statement showing the vacancies classified for DR Quota and PR Quota and vacancies actually utilised

Sl. No.	Block No.	Period of the Block and the Quota fixed as per C & R Rules (%)	Total No. of Vacancies occurred during the Block	Classification of vacancies as per quota rule		Vacancies actually utilised for		Unutilised vacancies as per the Quota (-)		Cumulative Total Exces (+) Dificit (-)		Sl.No. of Rankings for the Block in the list
				DR	PR	DR	PR	DR	PR	DR	PR	
1	2	3	4	5	6	7	8	9	1	2	3	4
1	I	01-11-1956 TO 01-02-1957 (assigned to ISS List Officers)	23	0	0	0	23	0	0	0	0	1-23(23)
2	II	02-12-1957 to 07-12-1957	No	0	0	0	0	0	0	0	0	0
3	III	08-12-1957 to 09-09-1958 (No classification assigned to Probationers of 1956)	31	0	0	0	31	0	0	0	0	24-54(31)
4	IV	10-09-1958 to 10-09-1959 (50:50) (21 vacancies assigned to 1958 DRs specially recruits)	35	21+7	7	21+7	7	0	0	0	0	55-89(35)
5	V	11-09-1959 to 20-04-1962 (33:66) (1/3:2/3)	123	41	82	50	82	0	0	(+)9	0	90-212(123)
6	VI	21-04-1962 to 10-09-1965 (33:66) (1/3:2/3)	77	26	51	26	51	0	0	25	0	213-289(77)
7	VII	11-09-1965 to 26-12-1969 (50:50)	115	57	58	25.	58	(-)32	0	-32	0	290-324(83)
8	VIII	07-12-1969 to 03-02-1970 (50:50)	9	4	5	36	5	0	0	8	0	373-413(41)
9	IX	04-02-1970 to 16-05-1972 (50:50)	84	42	42	23	42	(-)19	0	-19	0	414-478(65)
10	X	17-05-1972 to 20-08-1974 (50:50)	21	10	11	13	11	(-)16	0	-16	0	479-502(24)
11	XI	21-08-1974 to 13-07-1976 (50:50)	43	22	21	38	21	0	0	12	0	503-561(59)
12	XII	14-07-1976 to 26-07-1976 (50:50)	0	0	0	52	0	0	0	64	0	0
13	XIII	27-07-1976 to 30-07-1976 (50:50)	1	0	1	0	1	0	0	88	0	562(1)
14	XIV	31-07-1976 to 31-03-1977 (50:50)	57	29	28	29	28	0	0	104	0	563-619(57)
15	XV	01-04-1977 to 16-08-1978 (50:50)	20	10	10	10	10	0	0	143	0	620-639(20)
16	XVI	17-08-1978 to 31-12-1979 (50:50)	10	5	5	5	5	0	0	138	0	640-649(10)
17	XVII	01-01-1980 to 22-03-1982 (50:50)	164	82	82	82	82	0	0	110	0	650-813(164)

Sl. No.	Block No.	Period of the Block and the Quota fixed as per C & R Rules (%)	Total No. of Vacancies occurred during the Block	Classification of vacancies as per quota rule		Vacancies actually utilised for		Unutilised vacancies as per the Quota (-)		Cumulative Total Exces (+) Dificit (-)		Sl.No. of Rankings for the Block in the list
				DR	PR	DR	PR	DR	PR	DR	PR	
1	2	3	4	5	6	7	8	9	1	2	3	4
18	XVIII	23-03-1982 to 10-02-1983 (50:50)	12	6	6	6	6	0	0	119	0	814-825(12)
19	XIX	11-12-1983 to 21-09-1983 (50:50)	5	2	3	2	3	0	0	120	0	826-830(5)
20	XX	22-09-1983 to 27-09-1984 (50:50)	29	15	14	15	14	0	0	119	0	831-859(29)
21	XXI	28-09-1984 to 02-12-1984 (50:50)	5	3	2	3	2	0	0	116	0	860-864(5)
22	XXII	03-12-1984 to 04-12-1986 (50:50)	6	3	3	3	3	0	0	119	0	865-870(6)
23	XXIII	05-12-1986 to 31-12-1988 (50:50)	8	4	4	4	4	0	0	119	0	871-878(8)
24	XXIV	01-01-1989 to 31-12-1989 (50:50)	69	35	34	35	34	0	0	118	0	879-947(69)
25	XXV	01-01-1990 to 31-12-1990 (50:50)	15	7	8	7	8	0	0	119	0	948-962(15)
26	XXVI	01-01-1991 to 31-12-1991 (50:50)	47	24	23	24	23	0	0	118	0	963-1009(47)
27	XXVII	01-01-1992 to 15-07-1992 (50:50)	31	15	16	15	16	0	0	119	0	1010-1040(31)
28	XXVIII	16-07-1992 to 31-07-1992 (50:50)	0	0	0	0		0	0	119	0	0
29	XXIX	01-08-1992 to 13-09-1993 (50:50)	194	97	97	97	97	0	0	22	0	1041-1234(194)
30	XXX	14-09-1993 to 24-01-2006 (50:50)	610	305	305	36	305	(-)269	0	(-)269	0	1235-1577(342)
31	XXXI	25-01-2006 to 14-04-2006 (50:50)	13	6	7	49	7	(-)226	0	(-)226	0	1578-1633(55)
32	XXXII	15-04-2006 to 21-06-2006 (50:50)	15	8	7	78	7	(-)156	0	(-)156	0	1634-1718 (84)
33	XXXIII	22-06-2006 to 22-05-2008 (50:50)	187	93	94	38	94	(-)200	0	(-)200	0	1719-1849(130)
34	XXXIV	23-05-2008 to 31-12-2008 (50:50)	16	8	8	40	8	(-)166	0	(-)166	0	1850-1897(48)

ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3).

ANNEXURE -2

Final Gradation List of Group B Tahsildars

as on 31.12.2008 (From 01.01.2002 to 31.12.2008)

Sl. No.	Sl.No. feeder cadre	Name of Tahsildar	Date of Birth	Qualifying Date for Promotion	Remarks
1	2	3	4	5	6
